ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 | ಸಂಚಿಕೆ 39 | ಸೆಪ್ಟೆಂಬರ್ 27, 1987 | ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ದೆಹಲಿಯಲ್ಲಿ ಯುವಜನ - ವಿದ್ಯಾರ್ಥಿಗಳ ಭಾರಿ ರ್‍ಯಾಲಿ

ಭ್ರಷ್ಟಾಚಾರದಲ್ಲಿ ಮುಳುಗಿ ತೇಲುತ್ತಿರುವ ಜನ ವಿರೋಧಿ ರಾಜೀವ್ ಗಾಂಧಿಸರಕಾರವನ್ನು ಇಳಿಸುತ್ತೇವೆಂಬ ದೇಶದ್ರೋಹಿ ಕೋಮುವಾದಿ ವಿಚ್ಛಿದ್ರಕಾರಿಗಳನ್ನು ಸೋಲಿಸಿಯೇ ತೀರುತ್ತೇವೆಂಬ ಸಿಂಹ ಘರ್ಜನೆಯನ್ನು ಸೆ.22ರಂದು ಬುಧವಾರ ಭಾರತದ ಯುವಜನ ವಿದ್ಯಾರ್ಥಿಗಳು ದೇಶದ ಕೇಂದ್ರ ನಗರ ನವದೆಹಲಿಯಲ್ಲಿ ಮೊಳಗಿಸಿದರು.

ಪ.ಬಂಗಾಳ ಕೇರಳಗಳಿಂದ ಕೇವಲ ಪ್ರಾತಿನಿಧಿಕ ಭಾಗವಹಿಸುವಿಕೆ ಇರಬೇಕು, ಉತ್ತರಪ್ರದೇಶ, ಮಧ್ಯಪ್ರದೇಶ ಪಂಜಾಬ್, ಹರ್‍ಯಾಣ, ಹಿಮಾಚಲಪ್ರದೇಶಗಳಿಂದಲೇ ಒಂದು ಲಕ್ಷ ಯುವ ಜನರನ್ನು ಸಂಘಟಿಸಬೇಕು ಎಂಬ ಡಿ.ವೈ.ಎಫ್.ಐ. ಎಸ್.ಎಫ್.ಐ.ಗಳ ಜಂಟಿ ತೀರ್ಮಾನ ತಿಳಿದ ಕೂಡಲೇ ಕೇಂದ್ರ ಸರಕಾರ ಉದ್ರೇಕಗೊಂಡು ಈ ಕಾರ್ಯಕ್ರಮವನ್ನು ತಡೆಯಲು ಎಲ್ಲಾ ಪ್ರಯತ್ನ ನಡೆಸಿತು. ಕೇಂದ್ರ ಸರಕಾರಉತ್ತರದ ಈನಾಲ್ಕು ರಾಜ್ಯಗಳಿಗೆಸುತ್ತೋಲೆ ಕಳುಹಿಸಿ ಬಸ್ ಹಾಗೂ ರೈಲುಗಳನ್ನು ತಡೆದು ನಿಲ್ಲಿಸಬೇಕೆಂದೂ ರದ್ದುಗೊಳಿಸಲೂ ತಯಾರಿರಬೇಕೆಂದು ಸುತ್ತೋಲೆ ಕಳುಹಿಸಿತ್ತು ಮಾತ್ರವಲ್ಲ

ಅದನ್ನು ಆ ರಾಜ್ಯಗಳು ಜಾರಿಗೆ ತಂದವು. ರೈಲಿನಲ್ಲಿ ಬಸ್ಸಿನಲ್ಲಿ ಬರುತ್ತಿದ್ದವರನ್ನು ದಾರಿಯಲ್ಲಿಯೇ ಇಳಿಸಿದ್ದಾರೆ. ನೂರಾರು ರೀತಿಯ ತೊಂದರೆ ಕೊಟ್ಟಿದ್ದಾರೆ.

ಕೇಂದ್ರ ಸರಕಾರದ ರಾಜೀನಾಮೆ ಮಧ್ಯಂತರ ಚುನಾವಣೆಗಾಗಿ ಒತ್ತಾಯಿಸಲೆಂದು ಸೇರಿದ ಈ ಬೃಹತ್ ಸಮಾವೇಶವನ್ನು ತಡೆಗಟ್ಟಲುಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗಿ, ತಮ್ಮ ಗುರಿಯಂತೆ ಲಕ್ಷ ಸಂಖ್ಯೆಯಲ್ಲಿ ಯುವ ಜನರು ರಾಜಧಾನಿಯನ್ನು ಸೇರಿಯೇ ಸೇರಿದರು. ಅನೇಕ ಸಮಾವೇಶಗಳನ್ನು ಕಂಡ ನವದೆಹಲಿಯ ಚರಿತ್ರೆಯಲ್ಲಿಯೇ

ಹಾಲ್ಗಡಲಿನ ತೆರೆಯಂತೆ ಹರಿದ 9.ಕಿ.ಮೀ. ಉದ್ದದ ಮೆರವಣಿಗೆ

ಬೃಹತ್ತಾದ ಯುವ ಜನ ವಿದ್ಯಾರ್ಥಿಗಳ ಸಮಾವೇಶ ಇದು.

ಭಾರತದ ರಾಜಧಾನಿಗೇ ಹುರುಪು ನೀಡಿದ ಈ ಸಮಾವೇಶ ದೇಶದಲ್ಲಿ ಮುಂದಿನ ದಿನಗಳಲ್ಲಿ ನಡೆಯಲಿರುವ ರಾಜಕೀಯ ಸಮರ ಯುವ ಜನರು ವಿದ್ಯಾರ್ಥಿಗಳಿಗೆ ನೇರ ಸಂಬಂಧವಿರುವ ಹೋರಾಟ ಎಂದು ಸಾರಿತು.

ದೇಶದ ಎಲ್ಲಾ ಭಾಗಗಳಿಂದ ದೆಹಲಿಗೆ ಹರಿ ತಂದ ಈ ಯುವಜನತೆ ರಾಜಧಾನಿಯಲ್ಲಿ ಬಿಳಿಯ ಬಣ್ಣದ ಕೆಂಪುಚುಕ್ಕೆಯ ಬಾವುಟಗಳನ್ನು ಹಿಡಿದು ಸಾಗುತ್ತಾ ಹಾಲಿನ ಕಡಲಿನಂತೆ ಉಕ್ಕಿ ಹರಿಯಿತು. ಒಂದು ಬಿಳಿ ಪ್ರಳಯವನ್ನೇ ಸೃಷ್ಟಿಸಿತು. ಕೆಂಪು ಕೋಟೆಯಿಂದ ಆರಂಭವಾಗಿ ದೆಹಲಿಯ ಹೃದಯ ಭಾಗಗಳಲ್ಲಿ ಹರಿದಾಡಿದ ಈ ಮೆರವಣಿಗೆ ಚಾರಿತ್ರಿಕ ಸಮಾವೇಶಗಳೆಲ್ಲದರ ಸ್ಥಾನವಾದಬೋಟ್‌ಕ್ಲಬ್‌ನಲ್ಲಿ ಸಮಾವೇಶಗೊಂಡಿತು. 9 ಕಿ.ಮೀ ಉದ್ದವಾಗಿದ್ದ ಮೆರವಣಿಗೆಯ ತುದಿ ಬೋಟ್‌ಕ್ಲಬ್ ತಲುಪಿದರೂ ಕೊನೆ ಇನ್ನೂ ಕೆಂಪುಕೋಟೆಯಲ್ಲಿಯೇಇತ್ತು.

ಈ ಮೆರವಣಿಗೆ ಡಿ.ವೈ.ಎಫ್.ಐ. ಅಖಿಲ ಭಾರತ ಅಧ್ಯಕ್ಷ ಎಂ.ವಿಜಯ ಕುಮಾರ್, ಪ್ರ.ಕಾರ್ಯದರ್ಶಿ ಹನನ್ ಮುಲ್ಲಾ, ಎಂ.ಎ.ಬೇಬಿ, ಸೈಫುದ್ದೀನ್ ಚೌಧುರಿಯವರೂ, ಎಸ್.ಎಫ್.ಐ. ಅಖಿಲ ಭಾರತ ಅಧ್ಯಕ್ಷ ಎ.ವಿಜಯ್ ರಾಘವನ್, ಪ್ರಧಾನ ಕಾರ್ಯದರ್ಶಿ ನಿಲೋತ್ಪಲ ಬಸುರವರೂ ನೇತೃತ್ವ ವಹಿಸಿದ್ದರು.

ಈ ಸಮಾವೇಶದಲ್ಲಿ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಹರ್‌ಕಿಷನ್ ಸಿಂಗ್‌ಸುರಜೀತ್, ಹನ್ನನ್‌ಮುಲ್ಲಾ, ಎಂ.ಎ.ಬೇಬಿ,ಸೈಫುದ್ದೀನ್‌ಚೌಧುರಿ, ನಿಲೋತ್ಪಲಬಸು ಮಾತನಾಡಿದರು.

ರಾಜೀವ್‌ಗಾಂಧಿ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಬೇಕೆಂದು, ಹೊಸ ಶಿಕ್ಷಣ ನೀತಿಯನ್ನು ವಿಸರ್ಜಿಸಿ ಎಲ್ಲರಿಗೂ ಶಿಕ್ಷಣ ನೀಡುವ ಕಾರ್ಯಕ್ರಮ ತರಬೇಕೆಂದೂ,ಎಲ್ಲರಿಗೂ ಉದ್ಯೋಗ ಇಲ್ಲವೇ ನಿರುದ್ಯೋಗ ಭತ್ಯೆ ನೀಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ಕೇಂದ್ರ ಸರ್ಕಾರದ ಜನ ವಿರೋಧಿ ಆರ್ಥಿಕ ನೀತಿ ಭ್ರಷ್ಟಾಚಾರವನ್ನು ಖಂಡಿಸುವ ನಿರ್ಣಯವನ್ನು ಸಮಾವೇಶ ಒಕ್ಕೊರಲ ಧ್ವನಿಯಿಂದ ಅಂಗೀಕರಿಸಿತು. ನಿರ್ಣಯವನ್ನು ಎಸ್.ಎಫ್.ಐ. ಅಧ್ಯಕ್ಷ ವಿಜಯರಾಘವನ್ ಮಂಡಿಸಿದರೆ, ಡಿ.ವೈ. ಎಫ್.ಐ. ಪ್ರಧಾನ ಕಾರ್ಯದರ್ಶಿ ಹನ್ನನ್‌ಮುಲ್ಲಾ ಬೆಂಬಲ ನೀಡಿದರು.

ಪಂಜಾಬ್‌ನಲ್ಲಿ ಭಯೋತ್ಪಾದಕರ ಧಾಳಿ ದಬ್ಬಾಳಿಕೆ ಎದುರಿಸಿ, ಪ್ರಾಣವನ್ನು ಬಲಿಕೊಟ್ಟು ದೇಶದ ಸಮಗ್ರತೆಗಾಗಿ ಹೋರಾಟನಡೆಸುತ್ತಿರುವ, ಹತ್ತಾರು ಸಾವಿರ ಸಂಖ್ಯೆಯಲ್ಲಿ ದೆಹಲಿಗೆ ಧಾವಿಸಿದ ಪಂಜಾಬ್ ಮೆರವಣಿಗೆ ಮುಂಚೂಣಿಯಲ್ಲಿದ್ದರೆ, 15-20 ಲಕ್ಷ ಯುವ ಜನರ ಮಾನವ ಸರಪಳಿ ನಿರ್ಮಿಸಿ ಇತಿಹಾಸ ನಿರ್ಮಿಸಿದ ಕೇರಳ ಎರಡನೆಯದು, ನಂತರ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ರಾಜಸ್ತಾನ್, ಹರ್‍ಯಾಣಗಳೆಲ್ಲಾ ಇದ್ದವು. ಪಂಜಾಬ್, ಹರ್‍ಯಾಣ, ಮಹಾರಾಷ್ಟ್ರ ರಾಜಸ್ತಾನ್, ಹಿಮಾಚಲಪ್ರದೇಶಗಳ ಯುವ ಜನರೇ ಈ ಮೆರವಣಿಗೆಯಲ್ಲಿ ತುಂಬಿ ತುಳುಕಾಡುತ್ತಿದ್ದರು. ●

ದೇವೀಲಾಲ್‌ರಿಗೆ ಸುರ್ಜಿತ್ ಪತ್ರ

ಹರ್‍ಯಾಣಾ ಮುಖ್ಯ ಮಂತ್ರಿ ಚೌಧುರಿ ದೇವೀಲಾಲ್ ತಾನು ಸೆಪ್ಟೆಂಬರ್ 23ರಂದು ಕರೆದಿರುವ ವಿರೋಧ ಪಕ್ಷಗಳ ಸಭೆಗೆ ಬರಬೇಕೆಂದು ಕಾಂ.ಇ.ಎಂ.ಎಸ್.ಗೆ ನೀಡಿದ ಆಹ್ವಾನಕ್ಕೆ ಉತ್ತರವಾಗಿ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾಂ. ಹರ್ ಕಿಶನ್ ಸಿಂಗ್ ಸುರ್ಜಿತ್ ಬರೆದ ಪತ್ರವನ್ನು ಮುಂದೆ ಕೊಡಲಾಗಿದೆ.

"ಪ್ರೀತಿಯ ಚೌಧುರಿ ದೇವಿಲಾಲ್,

ನೀವು ಕರೆದ ಕಾಂಗ್ರೆಸ್ಸೇಯೇತರ ಪಕ್ಷಗಳ ಸಭೆಯಲ್ಲಿ ಭಾಗವಹಿಸಬೇಕೆಂದು ಕಾಂ.ಇ.ಎಂ.ಎಸ್. ಗೆ ಬರೆದ 18 ಸೆಪ್ಟೆಂಬರ್ 1987 ರ ಪತ್ರಕ್ಕೆ ಕೃತಜ್ಞತೆಗಳು. ಕಾಂ. ಇ.ಎಂ.ಎಸ್. ಪ್ರವಾಸದಲ್ಲಿರುವುದರಿಂದ ಹಾಗೂ ಮಧ್ಯೆಒಂದೇ ದಿನ ಉಳಿದಿರುವುದರಿಂದ ಪಕ್ಷದ ಅಭಿಪ್ರಾಯಗಳನ್ನು ನಾನು ನಿಮ್ಮ ಮುಂದಿಡುತ್ತೇದ್ದೇನೆ.

ನಿಮ್ಮ ಯೋಜಿತ ಸಭೆಯಲ್ಲಿ ಚರ್ಚಿಸ ಬೇಕೆಂದಿರುವ ಹೆಚ್ಚಿನ ವಿಷಯಗಳು ತುರ್ತಿನದಾಗಿದ್ದು, ಜಾತ್ಯಾತೀತ ವಿರೋಧ ಪಕ್ಷಗಳ ಐಕ್ಯ

ವಿರೋಧ ಪಕ್ಷಗಳ ಶೃಂಗ ಸಭೆ

ಪ್ರಯತ್ನಗಳು ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಅತ್ಯಗತ್ಯ. ಆದರೆ ಇಂತಹ ಸಭೆಗಳು ಯಶಸ್ವಿಯಾಗಬೇಕಾದರೆ ಅಲ್ಲಿ ಚರ್ಚಿಸಬೇಕಾದ ವಿಷಯಗಳು ಹಾಗೂ ಆಹ್ವಾನಿಸಬಹುದಾದ ಪಕ್ಷಗಳ ಬಗ್ಗೆ ವಿಭಿನ್ನ ಪಕ್ಷಗಳೊಂದಿಗೆ ಪೂರ್ವಭಾವೀ ವಿಚಾರ ವಿನಿಮಯ ನಡೆಸುವುದು ಅಗತ್ಯವಾಗುತ್ತದೆ. 1983-84ರಲ್ಲಿ ನಡೆದ ವಿರೋಧ ಪಕ್ಷಗಳ ಸಮ್ಮೇಳನಗಳ ಯಶಸ್ಸಿನ ಮೂಲ ಇಂತಹ ಪೂರ್ವಭಾವೀ ವಿಚಾರ ವಿನಿಮಯಗಳೇ.

ನಿಮ್ಮ ಪತ್ರದಲ್ಲಿ ಎತ್ತಿದ ಒಂದು ಮುಖ್ಯ ಪ್ರಶ್ನೆ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ಕೋಮುವಾದದ ಭೀಕರ ಅಪಾಯದ ವಿರುದ್ಧ ಹೋರಾಟ. ಈ ಪ್ರಶ್ನೆಯ ಮೇಲೆ ಸಭೆ ಗಮನ ಕೇಂದ್ರೀಕರಿಸುವುದೆಂದು ಹೇಳಿದ್ದೀರಿ. ಬಿ.ಜೆ.ಪಿ. ಇದರಲ್ಲಿ ಭಾಗವಹಿಸುವಾಗ ಇಂತಹ ಚರ್ಚೆಗಳಿಗೆ ಎಷ್ಟರ ಮಟ್ಟಿಗೆ ವಿಶ್ವಾಸಾರ್ಹವಾಗಬಲ್ಲವು ? ಯಾಕೆಂದರೆ ಎಲ್ಲರಿಗೂ ತಿಳಿದಿರುವಂತೆ ಆರ್.ಎಸ್.ಎಸ್. ನ ತತ್ವ ಈ ಪಕ್ಷದ

[8ನೇ ಪುಟ ನೋಡಿ]

ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾದ ಸಿಖ್ ಗುರುಗಳು

ಪಿ. ಬಿ. ಹೇಳಿಕೆ

ಸೆಪ್ಟೆಂಬರ್ 9ರಂದು ಸ್ವರ್ಣ ಮಂದಿರದ ಆವರಣದಿಂದ ನಾಲ್ವರು ಸಿಖ್ಖ ಧರ್ಮಗುರುಗಳು ನೀಡಿರುವ ಹೇಳಿಕೆ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ನೇರ ಬೆದರಿಕೆಯೊಡ್ಡುತ್ತದೆ ಎಂದು ಸಿ.ಪಿ.ಐ. (ಎಂ) ನ ಪಾಲಿಟ್ ಬ್ಯೂರೋ ಖಂಡಿಸಿದೆ.

ಈ ಧರ್ಮ ಗುರುಗಳು "ಸಮರಶೀಲ ಯುವಕ (ಸಿಖ್ಖ ಪ್ರತ್ಯೇಕತಾವಾದಿಗಳು) ರಿಗೆ" "ಗುಲಾಮಗಿರಿಯ ಸಂಕೋಲೆ ಮುರಿಯುವಲ್ಲಿ" ತಮ್ಮ 'ಹಾರ್ದಿಕ ಬೆಂಬಲ' ನೀಡಬೇಕೆಂದು ಸಿಖ್ಖರಿಗೆ ಕರೆ ನೀಡಿದ್ದಾರೆ. 16 "ಸಮರಶೀಲ" ಗುಂಪುಗಳನ್ನು ಒಂದಾಗಿಸಿ ತಮ್ಮ ಉದ್ದೇಶ ಸಾಧನೆಗೆ ಒಂದು ಹೊಸ ಕಾರ್ಯಕ್ರಮವೊಂದನ್ನು ರೂಪಿಸಲಾಗುವುದೆಂದೂ ಅವರು ಹೇಳಿದ್ದಾರೆ. ಅವರ ಮಟ್ಟಿಗೆ ಯಾವುದೇ ಅಕಾಲಿದಳ ಸಧ್ಯದ ಪರಿಸ್ಥಿತಿಯಲ್ಲಿ ಇಷ್ಟ್ರಯೋಗಿಕವಾಗಿದ್ದು "ಸಮರಶೀಲ ಸಿಖ್ಖರ" ಮುಖಂಡತ್ವ ಸ್ವೀಕರಿಸಬೇಕೆಂದೂ ಸಿಖ್ಖರಿಗೆ ಕರೆನೀಡಿದ್ದಾರೆ. ಅಕಾಲ್ ತಖ್ತ್‌ನ ಪ್ರಧಾನ ಧರ್ಮ ಗುರು ದರ್ಶನ್ ಸಿಂಗ್‌ರವರೂ ಕೂಡಾ "ರಣರಂಗ ಬಿಟ್ಟೋಡಿದ್ದಾರೆ" ಎಂದು ಅವರು ಆರೋಪಿಸಿದ್ದಾರೆ.

ತಮ್ಮ ರಾಷ್ಟ್ರ ವಿರೋಧಿ ಹಾಗೂ ಕ್ರಿಮಿನಲ್ ಚಟುವಟಿಕೆಗಳಿಂದಾಗಿ ಜನರಿಂದ ದೂರಾಗಿ, ಕಾಲು ಕೀಳಬೇಕಾದ ಪರಿಸ್ಥಿತಿಗೆಬಂದಿರುವ "ಸಿಖ್ಖ ಉಗ್ರಗಾಮಿ" ಗಳಿಗೆ ನೈತಿಕಪ್ರೋತ್ಸಾಹ ಕೊಡಲು ಸಾಮ್ರಾಜ್ಯಶಾಹಿಗಳ ಆದೇಶದ ಪ್ರಕಾರ ನಡೆಸುತ್ತಿರುವ ಹತಾಶ ಪ್ರಯತ್ನ ಇದೆಂದೂಪಾಲಿಟ್ ಬ್ಯೂರೋ ಖಂಡಿಸಿದೆ. ಅವರು ಈ ರೀತಿಯ ಹೇಳಿಕೆಗಳ ಬೆದರಿಕೆಗಳ ಮೂಲಕ ಜನರನ್ನು ದಬಾಯಿಸಲು ಸಾಧ್ಯವಿಲ್ಲ. ಅಲ್ಪಸಂಖ್ಯಾತರಲ್ಲಿ ಭೀತಿ ಹುಟ್ಟಿಸುವ ಅವರ ಪ್ರಯತ್ನಗಳನ್ನು ಎಲ್ಲಾ ದೇಶ ಪ್ರೇಮೀ ಜನತೆ ಒಗ್ಗಟ್ಟಿನಿಂದ ವಿಫಲಗೊಳಿಸುತ್ತಾರೆ.

ಇದು ಎರಡೂ ಅಕಾಲಿದಳಗಳಿಗೂ ಕೂಡಾ ಒಂದು ಸ್ಪಷ್ಟ ಎಚ್ಚರಿಕೆ.

[8ನೇ ಪುಟ ನೋಡಿ]

ಇನ್ನೂ ತೀವ್ರವಾಗಿ ರೈತ ಚಳುವಳಿ ಮುಂದುವರಿಯಲಿ

ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿಕೂಲಿಗಾರರ ಸಂಘಟನೆಯ ಕರೆಯ ಮೇರೆಗೆ ಸೆಪ್ಟೆಂಬರ್ 7ರಿಂದ13ರ ವರೆಗೆ ನಡೆದ ಚಳುವಳಿ ರೈತ ಸಮೂಹದಲ್ಲಿ ಹೊಸ ಸ್ಫೂರ್ತಿ, ಉತ್ಸಾಹ ತುಂಬಿಸಿದೆ. ಆ ಚಳುವಳಿಯನ್ನು ಇನ್ನೂ ಹೆಚ್ಚು ತೀವ್ರವಾಗಿ, ಪರಿಣಾಮಕಾರಿಯಾಗಿ, ಫಲದಾಯಕವಾಗಿ ಮುಂದುವರಿಸಿರಿ ಎಂಬ ಅಭಿಪ್ರಾಯ ಬಿಜಾಪುರ, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಸಂಚಾರ ಮಾಡಿದಾಗ, ರೈತ ಮುಖಂಡರೊಡನೆ ವಿಚಾರ ವಿನಿಮಯ ಮಾಡಿದಾಗ ಮೂಡಿಬಂತು. ಕೆಲವು ಕಡೆ ಧರಣಿ ಕೆಲವಡೆ ಪಿಕೆಟಿಂಗ್ ಹೆಚ್ಚಿನ ಕಡೆಗಳಲ್ಲಿ ಕಛೇರಿಗಳೊಳಗೆ ನುಗ್ಗಿ ಸರಕಾರಿ ಕೆಲಸಗಳನ್ನೆಲ್ಲ ಸ್ಥಗಿತಗೊಳಿಸುವ ಮೇಲ್ಮಟ್ಟದ ಚಳುವಳಿಯೂ ನಡೆಯಿತು. ಸಂಘಟನೆಯ ಬಲ ಮತ್ತು ಮುಖಂಡತ್ವದ ವಿಚಾರಧಾರೆಯನ್ನು ಹೊಂದಿಕೊಂಡಿತ್ತು ಚಳುವಳಿಯ ಸ್ವರೂಪ. ಅಂದರೆಕೆಲವು ಕಡೆ ಸೌಮ್ಯವಾಗಿಯೂ, ಕೆಲವು ಕಡೆ ಉಗ್ರವಾಗಿಯೂ,ಚಳುವಳಿನಡೆಯಿತು. ಭೂಮಿಗಾಗಿ, ಭೂಮಿಯ ಪಟ್ಟೆಕ್ಕಾಗಿ ಧನ ಸಹಾಯ ಪಡೆಯಲು, ಬೆಳೆಗೆ ನ್ಯಾಯ ಬೆಲೆ ಸಿಗುವಂತಾಗಲು ಕೃಷಿ ಕೂಲಿಗಾರರ ಕನಿಷ್ಟ ಕೂಲಿ ಮತ್ತಿನ್ನಿತರ ಬೇಡಿಕೆಗಳನ್ನುಪಡೆಯಲು ದೀರ್ಘ ಹೋರಾಟಕ್ಕೂ ಸಿದ್ಧ ಎಂಬ ಅಭಿಪ್ರಾಯ ಹಗರಿಬೊಮ್ಮನಹಳ್ಳಿ,ಹರಪನಹಳ್ಳಿ ಮತ್ತಿನ್ನಿತರ ಕೆಲವು ಪ್ರದೇಶಗಳ ರೈತರಲ್ಲಿ ಮೂಡಿಬಂದಿದೆ. ಜೈಲಿಗೆ ಹೋಗಲು ರೈತರು ಹೆದರ ಬಹುದೆಂಬ ಅಭಿಪ್ರಾಯ ಕೆಲವೆಡೆ ಮುಖಂಡರಲ್ಲಿ ಮೂಡಿಬಂದರೂ ಬಂಧನವಾಗುವಾಗ ಪ್ರದರ್ಶನಕಾರರಲ್ಲಿ ಕೆಲವರುಹಿಂದೇಟು ಹಾಕಿದರೂ ಒಂದು ಸಂಗತಿ ಸ್ಪಷ್ಟವಾಗಿ ಮೂಡಿಬಂದಿದೆ ಈ ಚಳುವಳಿಯಿಂದ. ಅದೇನೆಂದರೆ ನಾವು ಪ್ರತಿಯೊಂದು ಹಳ್ಳಿಗೆ ಹೋಗಿ, ರೈತರ ಬೇಡಿಕೆಗಳನ್ನು ಪ್ರಚಾರಗೊಳಿಸಿ, ಸಂಘ ಕಟ್ಟಿ ಹೋರಾಟದ ಕರೆ ಕೊಟ್ಟದ್ದಾದರೆ, ಸರಿಯಾದ ನೇತೃತ್ವ ನೀಡಿದ್ದಾದರೆ ರೈತ ಸಮುದಾಯ ಎಂಥ ಹೋರಾಟಕ್ಕೂಸಿದ್ಧವಿದೆಂಬ ಅಂಶ ಕಂಡುಬಂದಿದೆ.

ಜನತಾ-ಕಾಂಗ್ರೆ ಪಾತ್ರ

ಈ ಚಳುವಳಿಯಿಂದ ಮತ್ತೊಂದು ಮುಖ್ಯ ಅಂಶ ಗಮನಕ್ಕೆ ಬಂದಿದೆ. ರಾಯಚೂರು, ಬಳ್ಳಾರಿ, ಗುಲ್ಬರ್ಗಗಳ ಕೆಲವು ಪ್ರದೇಶಗಳಲ್ಲಿ ಜನತಾ ಕಾಂಗ್ರೆ ಮುಖಂಡರು ಈ ಚಳುವಳಿಯ ವಿರುದ್ಧ ಹೀನಾಯವಾದ ಅಂಜಿಕೆ ಉಂಟಾಗುವ ರೀತಿಯಲ್ಲಿ ಅಪಪ್ರಚಾರ ಮಾಡಿ, ದೈಹಿಕವಾಗಿಯೂ ರೈತರು ಭಾಗವಹಿಸದಂತೆ ತಡೆದಿದ್ದಾರೆ. ಮಂಡಲ ಪಂಚಾಯಿತಿಗಳು ಸ್ಥಾಪನೆಯಾಗಿರುವುದರಿಂದ, ತಮ್ಮ ಮಂಡಲ ಪಂಚಾಯತಿ ಸದಸ್ಯತ್ವದ ಪ್ರಭಾವಕ್ಕೆ ಎಲ್ಲಿ ಅಡ್ಡಿಯಾಗುತ್ತದೋ, ರೈತರಲ್ಲಿ ಚಳುವಳಿ ಮನೋಭಾವ ಬೆಳೆದು ಬಂದದ್ದಾದರೆ ತಮ್ಮ ಪಟ್ಟ ಭದ್ರ ಹಿತಾಸಕ್ತಿಗಳಿಗೆ ಎಲ್ಲಿ ಧಕ್ಕೆ ಉಂಟಾಗುತ್ತದೋ ಎಂಬ ಭೀತಿಯಿಂದ ಈ ಚಳುವಳಿಯನ್ನು ವಿರೋಧಿಸಿ,ಭಾಗವಹಿಸುವವರನ್ನು ತಡೆಯಲಾಗಿದೆ. ಕೆಲವು ಕಡೆ ಜನತಾ-ಕಾಂಗ್ರೆ ಮಂಡಲ ಪಂಚಾಯತಿ ಸದಸ್ಯರು ತಮ್ಮ ಬೆಂಬಲಿಗರೊಂದಿಗೆ, ಮೆರವಣಿಗೆ, ಪಿಕೆಟಿಂಗ್‌ಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಇಂಥ ಚಳುವಳಿ ಇನ್ನು ಮುಂದೆಯೂ ನಡೆಯಬೇಕೆಂಬ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಅರೆ ಪಾಳೆಯಗಾರಿ, ಊಳಿಗಮಾನ್ಯ ಪದ್ಧತಿ ಇನ್ನೂಬಲವಾಗಿಯೇ ಬೇರೂರಿ ನಿಂತಿರುವಾಗ, ಮೂಢ ನಂಬಿಕೆಗಳಿಗೆಲ್ಲ ಅದು ಆಗರವಾಗಿರುವಾಗ, ತನ್ನ ವರ್ಗ ಹಿತ ದೃಷ್ಟಿಯಿಂದ ರೈತ-ಕೃಷಿ ಕಾರ್ಮಿಕರಲ್ಲಿ ಬೆಳೆದು ಬರುತ್ತಿರುವ ಹೋರಾಟದ ಪ್ರವೃತ್ತಿಯನ್ನು ಮೊಳಕೆಯಲ್ಲೇ ಚಿವುಟಿ ಹಾಕಲು ಆ ಶಕ್ತಿಗಳು ಸರ್ವ ಪ್ರಯತ್ನ ನಡೆಸುವುದರಲ್ಲಿ ಆಶ್ಚರ್ಯವಿಲ್ಲ. ಈ ಅಂಶ ರಾಯಚೂರು ಜಿಲ್ಲೆಯಲ್ಲಿ ಹಾಗೂ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕಂಡು ಬಂದಿದೆ.

ಇದು ಹೊಸದೇನಲ್ಲ, ನಾವು 40-50ರ ದಶಕದಲ್ಲಿ ರೈತ ಸಂಘಟನೆ ಪ್ರಾರಂಭ ಮಾಡಿದಾಗ, ಇದಕ್ಕಿಂತ ಲೂಬಲಿಷ್ಟವಾದ ಪ್ರತಿರೋಧ ಎದುರಿಸಿದ್ದೆವು. ಅದನ್ನು ಗಣನೆಗೆ ತೆಗೆದುಕೊಂಡಿದ್ದರೆ, ಕರ್ನಾಟಕದ ಬಹುಭಾಗದಲ್ಲಿ ಈಗ ಪರಿಸ್ಥಿತಿ ಬದಲಾಗಿದೆ. ಆದರೆ ರೈತ ಸಂಘಟನೆ ಬೆಳೆದು ಬರುತ್ತಿರುವಂತೆ ಪಟ್ಟ ಭದ್ರ ಹಿತಾ ಸಕ್ತಿಗಳೂ ಜಾಗೃತಿ ಗೊಂಡು ರೈತ ಸಂಘಟನೆ ಬೆಳೆಯದಂತೆ, ಸರ್ವ ಪ್ರಯತ್ನ ಮಾಡುವುದರಲ್ಲಿ ಸಂಶಯವಿಲ್ಲ, ಆದರೆ ಇಂದಿನ ಅಲೆ ರೈತಸಂಘದ, ರೈತ ಚಳುವಳಿಯ ಪರವಾಗಿರುವುದರಿಂದ ಧೈರ್ಯದಿಂದ ಮುನ್ನುಗ್ಗುವುದು ಅತ್ಯಗತ್ಯ. ಬೆಳೆದು ಬರುತ್ತಿರುವ ರೈತ ಸಂಘಟನೆಯ ಶಕ್ತಿಯನ್ನು ನೋಡಿಯೆ ಭೂಮಾಲಕರ ರಾಜ್ಯ ರೈತ ಸಂಘವೂ ಬೆಳೆದ ಬೆಳೆಗಾಗಿ ಬೆಲೆಚಳುವಳಿ ಹೂಡಲು ಪ್ರಾರಂಭಿಸಿದೆ. ರೈತರಲ್ಲಿ ಗೊಂದಲ ಉಂಟು ಮಾಡುವ, ರೈತರಲ್ಲಿ ಒಡಕುಂಟುಮಾಡುವ ಕ್ರಮ ಇದಾಗಿದೆ. ರೈತ ಬೆಳೆದ ಬೆಳೆಗೆ ನ್ಯಾಯ ಬೆಲೆ ಸಿಗಬೇಕೆಂಬ ಬೇಡಿಕೆಯೂ ಮಹತ್ವದ ಸ್ಥಾನದಲ್ಲಿದೆ. ಅಖಿಲಭಾರತ ಕಿಸಾನ್ ಸಭಾದ ಚಳುವಳಿಯಲ್ಲಿ. ಇಡೀ ರೈತ ಸಮುದಾಯದ ಹಲವಾರು ಪ್ರಮುಖ ಬೇಡಿಕೆಗಳಿಗಾಗಿ ನಮ್ಮ ಚಳುವಳಿ ಇರುವಾಗ ಒಂದೇ ಬೇಡಿಕೆಗಾಗಿ ನಡೆಯುವ ಚಳುವಳಿ ಸಮರ್ಪಕವಲ್ಲೆಂದು ತಿಳಿಯ ಹೇಳಿ, ರೈತರಲ್ಲಿ ಐಕ್ಯತೆ ಸಾಧಿಸುವ ದೃಷ್ಟಿಯಲ್ಲಿ ಐಕ್ಯ ಹೋರಾಟ ಅಗತ್ಯ ಎಂಬಂಶವನ್ನು ರೈತರಲ್ಲಿ ಪ್ರಚಾರ ಮಾಡಿ ನಮ್ಮ ಚಳುವಳಿ, ಸಂಘಟನೆಗಳನ್ನ ಕುಂಠಿತಗೊಳಿಸುವ ಪ್ರಯತ್ನವನ್ನು ತಡೆಗಟ್ಟಬೇಕು.

ಹೋರಾಟ ನೋಡಿ ಜನರ ಪಾಲ್ಗೊಳ್ಳುವಿಕೆ

ಗುಲ್ಬರ್ಗಾದಲ್ಲಿ ಮತ್ತೊಂದು ಅಂಶ ಕಂಡು ಬಂದಿದೆಯಂತೆ. ಹೋದ ವರ್ಷ ನಡೆಸಿದ ರೈತರ ಬೃಹತ್ ವಿಧಾನ ಸೌಧ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸಿದವರೆಲ್ಲ ಈ ಪಿಕೇಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಅದರಲ್ಲಿಯ ಕೆಲವೇ ಜನ ಈ ಹೋರಾಟದಲ್ಲಿ ಭಾಗವಹಿಸಿದ್ದರು. ಜೈಲಿಗೆ ಹೋಗುವ ತಯಾರಿಯಲ್ಲೇ ಬಂದಿದ್ದರು. ಅವರ ಜೊತೆಯಲ್ಲಿ ಅಖಿಲ ಭಾರತ ಕರೆಯ ಅರ್ಥವನ್ನು ಅರಗಿಸಿಕೊಂಡ ಹೊಸ

ಎನ್. ಕೆ. ಉಪಾಧ್ಯಾಯ

ಬರೂ ಬಂದಿದ್ದರು. ಯಾವ ಬೇಡಿಕೆಗಳನ್ನು ಆಧರಿಸಿ ನಾವು ಚಳುವಳಿ ಹೂಡಿದ್ದೇವೋ, ಪ್ರಚಾರ ಮಾಡಿದ್ದೇವೋ, ರೈತರೆಲ್ಲ ಅವುಗಳ ಕುರಿತು ಪ್ರಶಂಸೆ ವ್ಯಕ್ತ ಮಾಡಿದ್ದಾರೆ. ಇನ್ನೂ ಹೆಚ್ಚಿನ ಹಳ್ಳಿಗಳಲ್ಲಿ ಪ್ರಚಾರ ಕಾರ್ಯಕ್ರಮ ಮಾಡಿದ್ದರೆ ಇನ್ನು ಹೆಚ್ಚು ರೈತರು ಚಳುವಳಿಯಲ್ಲಿ ಧುಮುಕಲು ಸಾಧ್ಯವಿತ್ತು. ಕಾರ್ಯಕರ್ತರ ಮತ್ತು ಹಣದ ಅಭಾವ ದೊಡ್ಡ ಸಮಸ್ಯೆಯಾಗಿತ್ತು. ಬರಗಾಲ ಪರಿಸ್ಥಿತಿ ಇಲ್ಲದಿದ್ದಲ್ಲಿ ಹಣದ ಸಮಸ್ಯೆ ಬಗೆಹರಿಸ ಬಹುದಾಗಿತ್ತು. ಕಾರ್ಯ ಕರ್ತರನ್ನು ಹುಡುಕಿ, ಅವರಿಗೆ ರಾಜಕೀಯ ಸೈದ್ಧಾಂತಿಕ ಶಿಕ್ಷಣ ಏರ್ಪಡಿಸಿ, ರೈತರ ಮಧ್ಯೆ ಕೆಲಸ ಮಾಡುವ ರೀತಿಯಲ್ಲಿ ಅವರನ್ನು ಪಳಗಿಸಿ ಗ್ರಾಮಾಂತರ ಪ್ರದೇಶಕ್ಕೆ ಒದಗಿಸಿದರೆ ಇನ್ನೊಂದು ವರ್ಷ ದೊಳಗಾಗಿ ಪರಿಸ್ಥಿತಿ ಬದಲಾಗುವುದರಲ್ಲಿ ಸಂಶಯ ವಿಲ್ಲೆಂದು ರೈತ ಮುಖಂಡರ ಅನಿಸಿಕೆ.

ಸರಿಯಾದ ಘೋಷಣೆಗಳು

ಅಖಿಲ ಭಾರತ ಮಟ್ಟದ ಬೇಡಿಕೆಗಳ ಜೊತೆಯಲ್ಲಿ ಜಿಲ್ಲೆಯ, ಪ್ರದೇಶದ ಪ್ರಮುಖ ಬೇಡಿಕೆಗಳಿಗೂ ಹೆಚ್ಚು ಪ್ರಚಾರ ಕೊಟ್ಟಿರುವುದರಿಂದ ಹೆಚ್ಚು ಜನರನ್ನು ಆಕರ್ಷಿಸಲು ಸಾಧ್ಯವಾಯಿತೆಂದು ರೈತ ಮುಖಂಡರ ಹೇಳಿಕೆ ವಾಸ್ತವಿಕಾಂಶಕ್ಕೆ ಹೊಂದಿಕೊಂಡಿದೆ. ಬಿಜಾಪುರ ಜಿಲ್ಲೆಯಲ್ಲಿ ಭೀಮಾ ಆಲಮಟ್ಟಿ ಅಣೆಕಟ್ಟು, ಮುಳವಾಡಯಾತ ನೀರಾವರಿ ಪೋಲೀಸರ ದಬ್ಬಾಳಿಕೆಗಳು, ಗುಲ್ಬರ್ಗಾ ರಾಯಚೂರ ಜಿಲ್ಲೆಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ,ಅದಕ್ಕೆ ಬಲದಂಡೆ ಕಾಲುವೆ, ರಾಯಚೂರ ಬಳ್ಳಾರಿಗಳಲ್ಲಿ ತುಗಭದ್ರ ನೀರು ಬಿಡಗಡೆ, ಬಳ್ಳಾರಿಯಲ್ಲಿ ರೂಪದಗುಡಿ ಅಣೆ ಕಟ್ಟು ಹರಪನಹಳ್ಳಿ, ಹಗರಿ ಬೊಮ್ಮನಹಳ್ಳಿ ತಾಲ್ಲೂಕುಗಳಲ್ಲಿ ಭದ್ರಾ ಅಣೆ ಕಟ್ಟು ಎತ್ತರಿಸಿ, ಕಾಲುವೆ ಮೂಲಕ ನೀರು ಒದಗಿಸುವುದು ಮುಂತಾದ ನೀರಾವರಿ ಯೋಜನೆಗಳಿಗಾಗಿ ನಡೆಸಿದ ಪ್ರಚಾರ ಎಲ್ಲ ವರ್ಗದ ರೈತರನ್ನು ಆಕರ್ಷಿಸಿತು. ಮಾತ್ರವಲ್ಲ ರೈತ ಸಂಘ ಸರಿಯಾದ ಬೇಡಿಕೆಗಳಿಗಾಗಿ ಹೋರಾಡುತ್ತಿದೆಂಬ ಒಳ್ಳೆ ಅಭಿಪ್ರಾಯವನ್ನು ಮೂಡಿಸಿತು.ಆದರೆ ರಾಯಚೂರಜಿಲ್ಲೆಯಲ್ಲಿ ರೈತರ ಒಂದು ಗುಂಪು ಮುಖಂಡತ್ವ ತಮ್ಮ ಕೈಮೀರಿ ಹೋಗಬಹುದೆಂಬ ಅಂಜಿಕೆಯಿಂದ ನೀರಾವರಿಗಾಗಿ ನಡೆಸುವ ಚಳುವಳಿಗೆ ಅಡ್ಡಿ ಉಂಟು ಮಾಡುವ ಪ್ರವೃತ್ತಿಯನ್ನು ತೋರಿಸುತ್ತಿದೆಯಂತೆ. ಭೂಮಿಗೆ ನೀರಿಗಾಗಿ ದೊಡ್ಡ ಪ್ರವಾಹವೇ ಮೇಲೆದ್ದುಬರುತ್ತಿರುವಾಗ ಕೆಲವು ಸ್ವಾರ್ಥಿಗಳ ಅಡ್ಡಿ ಆತಂಕಗಳುಪ್ರವಾಹದಲ್ಲಿಕೊಚ್ಚಿ ಹೋಗುವುದರಲ್ಲಿ ಸಂಶಯವಿಲ್ಲ.ಸಮಸ್ಯೆಗಳು ಅಪಾರವಾಗಿವೆ.ರೈತರು ಹೋರಾಟಕ್ಕೆ ತಯಾರಿದ್ದಾರೆ. ಅವರನ್ನು ಸಂಘಟಿಸಿ, ಮುಖಂಡತ್ವ ನೀಡುವವರು ಬೇಕೆಂದು ಅವರ ಬೇಡಿಕೆ. ಆ ಜವಾಬ್ದಾರಿಯನ್ನು ಹೊರುವ ಕರ್ತವ್ಯವನ್ನು ಪ್ರಾಂತ ರೈತಸಂಘ ಪೂರ್ಣಗೊಳಿಸಬೇಕಾಗಿದೆ, ಅವಕಾಶವನ್ನೂ, ಸದುಪಯೋಗ ಪಡಿಸೋಣ, ಸಂಘಟನೆಯನ್ನೂ, ಚಳುವಳಿಯನ್ನೂ ಮುಂದಕ್ಕೊಯ್ಯೋಣ. ●

ಸರ್ಕಾರಿ ಕಾಲೇಜ್ ಎಸ್. ಎಫ್. ಐ. ಘಟಕ

ಸಿಂಧನೂರು ಸರ್ಕಾರಿ ಜ್ಯೂನಿಯರ್ ಹಾಗೂ ಪದವೀ ಕಾಲೇಜ್ ಎಸ್.ಎಫ್.ಐ. ಘಟಕವನ್ನು ಇತ್ತೀಚೆಗೆ ರಚಿಸಲಾಯಿತು. ರಾಜ್ಯ ಸಮಿತಿ ಸದಸ್ಯ ಶೇಕ್ಷಾಖಾದ್ರಿ,ಮಾತನಾಡಿದರು. ಜ್ಯೂನಿಯರ್ ಕಾಲೇಜು ಘಟಕಕ್ಕೆ ಕಾ॥ ಪ್ರ್ಯಾಂತಲಿನ್ (ಅಧ್ಯಕ್ಷ) ಯಮನಪ್ಪ, ಇ. ಯಮನಪ್ಪ,(ಉಪಾಧ್ಯಕ್ಷರು), ತಿಪ್ಪಣ್ಣ ಗೊಬ್ಬರ (ಕಾರ್ಯದರ್ಶಿ), ಸುರೇಶ್, (ಸಹಕಾರ್ಯದರ್ಶಿ) ಮಲ್ಲಿಕಾರ್ಜುನ (ಖಜಾಂಚಿ) ಯವರನ್ನೊಳಗೊಂಡು 17 ಜನರ ಕಾರ್ಯಕಾರಿ ಸಮಿತಿ ರಚಿಸಲಾಗಿದೆ.

ಸರ್ಕಾರಿ ಪದವಿ ಕಾಲೇಜು ಸಮಿತಿಗೆ ಕಾ॥ ಶಿವಕುಮಾರ (ಅಧ್ಯಕ್ಷ) ವೀರಭದ್ರಯ್ಯ, ಕನಕಪ್ಪ (ಉಪಾಧ್ಯಕ್ಷರು) ತನ್‌ವಿರುಲ್ ಹಸನ್ (ಕಾರ್ಯದರ್ಶಿ) ಸಿದ್ರಾಮಯ್ಯ, ಈಶಪ್ಪ (ಸಹ ಕಾರ್ಯದರ್ಶಿಗಳು) ಲಿಂಗನಗೌಡ (ಖಜಾಂಚಿ) ಗಿರಿಧರ, ಪಾಲ್ದದ ಗುಡಿ ಸಹಖಜಾಂಚಿಗಳನ್ನೊಳಗೊಂಡು 37 ಜನರ ಕಾರ್ಯಕಾರಿ ಸಮಿತಿ ರಚಿಸಲಾಗಿದೆ. ಕಾಂಟಗಿಯಿಂದ ಗಂಗಾವತಿಗೆ ವಿದ್ಯಾಭ್ಯಾಸಕ್ಕಾಗಿ ಪ್ರತಿನಿತ್ಯ ಹೋಗುವ ವಿದ್ಯಾರ್ಥಿಗಳಿಗೆ ಬಸ್ಸಿನ ಸೌಕರ್ಯ ಒದಗಿಸಲು ಸೆಪ್ಟೆಂಬರ್ 4ರಂದು ಬಸ್‌ಡಿಪೋ ಮೆನೇಜರ್‌ಗೆ ಮನವಿ ಅರ್ಪಿಸಿ ಒತ್ತಾಯಿಸಲಾಯಿತು. ●

ಎಗ್ರಿ ಗೇಟ್ ವಿರುದ್ಧ ಪ್ರತಿಭಟನೆ

ಎಸ್.ಎಫ್.ಐ. ಶಿರಸಿಶಾಖೆ ನೇತೃತ್ವದಲ್ಲಿ ಸೆಪ್ಟೆಂಬರ್ 9ರಂದುಕರ್ನಾಟಕ ವಿಶ್ವವಿದ್ಯಾಲಯ ಪದವಿ ತರಗತಿಗಳಿಗೆ ಎಗ್ರಿ ಗೇಟ್ ಪದ್ದತಿಯನ್ನು ಮುಸ್ಸೂಚನೆ ನೀಡದೆ ಜಾರಿಗೊಳಿಸಿದ ಕ್ರಮದ ವಿರುದ್ಧ ಶಿರಸಿ ನಗರದ ಎಂ.ಎಂ. ಕಲಾ, ವಿಜ್ಞಾನ ವಿದ್ಯಾಲಯ ಮತ್ತು ಎಂ.ಇ.ಎಸ್. ವಾಣಿಜ್ಯ ವಿದ್ಯಾಲಯದ 200 ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮೆರವಣಿಗೆ ನಡೆಸಿ ಉಪ ವಿಭಾಗಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ಈ ಕುರಿತು ಹಲವಾರು ಬಾರಿ ಗಮನ ಸೆಳೆದರೂ ಯಾವುದೇ ತೀರ್ಮಾನ ಕೈಗೊಳ್ಳದ ಉಪ ಕಲಪತಿಯವರಾದ ನಾರಾಯಣ ರೆಡ್ಡಿಯವರ ಪ್ರತಿಕೃತಿಯನ್ನು ದಹನ ಮಾಡಲಾಯಿತು. ವಿದ್ಯಾರ್ಥಿಗಳು ಎಗ್ರಿ ಗೇಟ್ ಪದ್ಧತಿ ಜಾರಿಯಿಂದ ಉಂಟಾಗಿರುವ ತೊಡಕನ್ನು ನಿವಾರಿಸಲು ಎಸ್.ಎಫ್.ಐ. ಅಧ್ಯಕ್ಷರಾದ ಕಾ॥ ಶಾಂತರಾಮ ನಾಯಕ್ ಸಭೆಯಲ್ಲಿ ಮಾತನಾಡುತ್ತಾ ಒತ್ತಾಯಿಸಿದರು,ಇಲ್ಲವಾದಲ್ಲಿ ಮುಂದಿನ ಹೋರಾಟಕ್ಕೆ ಸಿದ್ಧರಾಗಲು ಅವರು ಕರೆನೀಡಿದರು.

ವಿಚಾರ ಸಂಕಿರಣ

ಸೆಪ್ಟೆಂಬರ್ 23 ರಂದು ನವದೆಹಲಿಯಲ್ಲಿ 1ಲಕ್ಷ ವಿದ್ಯಾರ್ಥಿ ಯುವಜನರು ಭ್ರಷ್ಟಾಚಾರದಿಂದ ಕೂಡಿರುವ ರಾಜೀವ್ ಗಾಂಧಿ ಸರ್ಕಾರದ ರಾಜೀನಾಮೆ ಹೊಸ ಚುನಾವಣೆಗೆಒತ್ತಾಯಿಸಿ ನಡೆಯುವ ದೆಹಲಿ ಚಲೋ ಕಾರ್ಯಕ್ರಮದ ಪೂರ್ವಭಾವಿಯಾಗಿ ಸೆಪ್ಟೆಂಬರ್ 15 ರಂದು ಬೆಂಗಳೂರಿನ ಸರ್ಕಾರೀ ಕಾನೂನು ವಿದ್ಯಾಲಯದಲ್ಲಿ 'ಶಿಕ್ಷಣ ಪದ್ಧತಿ, ನಿರುದ್ಯೋಗ, ರಾಷ್ಟ್ರೀಯ ಸಮಗ್ರತೆ' ಕುರಿತು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಜಂಟಿಯಾಗಿ ವಿಚಾರ ಸಂಕೀರಣವೊಂದನ್ನು ಏರ್ಪಡಿಸಲಾಗಿತ್ತು. ಶಿಕ್ಷಣ ನೀತಿ ಕುರಿತು ಸೆಂಟ್‌ಜೋಸೆಫ್ ಕಾಲೇಜ್ ಉಪನ್ಯಾಸಕರಾದ ಮಾನ್ಯಶ್ರೀಜಿ.ಕೆಗೋವಿಂದ್‌ರಾವ್‌ನಿರುದ್ಯೋಗ ಸಮಸ್ಯೆ ಕುರಿತು ವಕೀಲರಾದ ಮಾನ್ಯ ಶ್ರೀಎಚ್.ಎನ್.ನಾಗಮೋಹನದಾಸ್, ರಾಷ್ಟ್ರೀಯ ಸಮಗ್ರತೆ ಕುರಿತು ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾ.ಸಿ.ನಂಜುಂಡಪ್ಪ ಮಾತನಾಡಿದರು. ಡಿ.ವೈ.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಕಾ.ಶಿವರಾಂ ಅಧ್ಯಕ್ಷತೆ ವಹಿಸಿದ್ದರು.ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ.ಎಸ್.ಆರ್. ಆರಾಧ್ಯ ಸಮಾರೋಪಭಾಷಣ ಮಾಡಿದರು. ಪ್ರಾರಂಭದಲ್ಲಿಎಸ್.ಎಫ್.ಐ.ನ ಕಾ.ಡಿ.ಶಿವಶಂಕರ್ ಸ್ವಾಗತಿಸಿ ಕೊನೆಯಲ್ಲಿ ಡಿ.ವೈ.ಎಫ್.ಐ.ನ ಕಾ.ಟಿ.ಶಿವಶಂಕರ್ ವಂದನಾರ್ಪಣೆ ಮಾಡಿದರು.

ಕಾ|| ಸೂರಿ ಅನಿರ್ದಿಷ್ಟ ಕಾಲ ಉಪವಾಸ ಸತ್ಯಾಗ್ರಹ

ಇತ್ತೀಚೆಗೆ ಬಿ.ಇ.ಎಲ್.ನ ವಿವಿಧ ಸಮಿತಿಗಳಿಗಾಗಿ ನಡೆದ ಚುನಾವಣೆಗಳಲ್ಲಿ ಸಿ.ಐ.ಟಿ.ಯು. ಶೇ. 24ರಷ್ಟು ಮತಗಳನ್ನು ಗಳಿಸಿದ್ದ ಭಾರಿ ಮುನ್ನಡೆ ಸಾಧಿಸಿರುವುದು ಐಕ್ಯರಂಗದಲ್ಲಿ ಈಗಾಗಲೇ ವರದಿಯಾಗಿದೆ. ಈ ಚುನಾವಣೆಗಳ ನಂತರ ಕಾರ್ಮಿಕರ ಅಭಿಪ್ರಾಯವನ್ನು ಅಲಕ್ಷಿಸಿ ಈಗ ಬಿ.ಇ.ಎಲ್.ನ ಎಲ್ಲಾ ಘಟಕಗಳ ಕಾರ್ಮಿಕ ಸಂಘಗಳ ಜೊತೆ ನಡೆಯುತ್ತಿರುವ ವೇತನ ಒಪ್ಪಂದ ಮಾತುಕತೆಗಳಲ್ಲಿ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಿ ಅಖಿಲ ಭಾರತ ಸಿ.ಐ.ಟಿ.ಯು. ಉಪಾಧ್ಯಕ್ಷ ಕಾ|| ಸೂರಿಯವರು ದಿನಾಂಕ 22 ರಿಂದ ಬಿ.ಇ.ಎಲ್. ಕಾರ್ಖಾನೆಯ ಎದುರುಗಡೆ ಅನಿರ್ದಿಷ್ಟಕಾಲ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ. ಇದಕ್ಕೆ ಮೊದಲು ಸಿ.ಐ.ಟಿ.ಯು.ಗೆ ಸೇರಿದ ಭಾರತ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್ ಸರದಿ ಉಪವಾಸ ಸತ್ಯಾಗ್ರಹ ಮಾಡಿ ತನ್ನ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿದರೂ ಆಡಳಿತ ವರ್ಗ ಮಣಿಯದಿದ್ದುದರಿಂದ ಕಾ|| ಸೂರಿಯವರೆ ಉಪವಾಸ ಸತ್ಯಾಗ್ರಹ ಅನಿವಾರ್ಯವಾಯಿತು. ತಾ|| 22ರಂದು ಮಧ್ಯಾಹ್ನ ಉಪವಾಸ ಆರಂಭಿಸುವ ಮುನ್ನ ನೆರೆದ ಕಾರ್ಮಿಕ ಸಭೆಯಲ್ಲಿ ಬೆಂಗಳೂರು ಸಿ.ಐ.ಟಿ.ಯು. ಸಮಿತಿಯ ಸಂಚಾಲಕ ಕಾ|| ಬಾನು, ಐ.ಟಿ.ಸಿ. ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿಯವರು ಮತ್ತು ಸಿ.ಪಿ.ಐ. (ಎಂ) ನ ಪರವಾಗಿ ಎಸ್.ಆರ್ ಆರಾಧ್ಯ ಇವರು ಮಾತನಾಡಿದರು. ಕೊನೆಯಲ್ಲಿ ಮಾತನಾಡಿದ ಕಾ|| ಸೂರಿಯವರು ತಮ್ಮ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಆರಂಭಿಸುತ್ತಿರುವ ಅನಿವಾರ್ಯತೆಯನ್ನು ಬಿ.ಇ.ಎಲ್. ಕಾರ್ಮಿಕರ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನೂ ವಿವರಿಸಿದರು. ಇದಕ್ಕೆ ಮೊದಲು ನಡೆದ ಎರಡು ದಿನಗಳ ಸರದಿ ಉಪವಾಸ ಸತ್ಯಾಗ್ರಹದಲ್ಲಿ ಮೊದಲ ದಿನ ಕಾ|| ಎ.ಇ. ಸುಬ್ರಮಣ್ಯಂ ನಾಯಕತ್ವದ 6 ಜನ ಎರಡನೇ ದಿನ 9 ಜನರು ನಾಯಕತ್ವ ವಹಿಸಿದ್ದರು ಯಶವಂತಪುರ ಹಾಗೂ ಕೃಷ್ಣರಾಜಪುರಗಳ ಕಾರ್ಖಾನೆಗಳ ಕಾರ್ಮಿಕರು ಸೌಹಾರ್ದ ಕಾರ್ಯಕ್ರಮ ಏರ್ಪಡಿಸಿದ್ದಾರೆ. ●

ಕರ್ನಾಟಕ ರೀಜಿನಲ್ ಇಂಜಿನಿಯರಿಂಗ್ ಕಾಲೇಜು ಚುನಾವಣೆಯಲ್ಲಿ

ಎಸ್. ಎಫ್. ಐ. ಜಯಭೇರಿ

ಮಂಗಳೂರಿನ ಸುರತ್ಕಲ್ ರೀಜಿನಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೆಪ್ಟೆಂಬರ್ 19 ರಂದು ನಡೆದ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ನರಸಿಂಹರಾಜು 400ಕ್ಕೂ ಹೆಚ್ಚಿನ ಮತಗಳ ಅಂತರದಿಂದ ಹಾಗೂ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ ಕೆ.ಜಿ.ಕುಮಾರ್ 200ಕ್ಕೂ ಹೆಚ್ಚಿನ ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿ ಸಂಘದ ಎಲ್ಲಾ ಏಳು ಪದಾಧಿಕಾರಿಗಳ ಸ್ಥಾನವನ್ನು ಎಸ್. ಎಫ್. ಐ. ಗಳಿಸಿ ಜಯಭೇರಿ ಸಾಧಿಸಿದೆ.

ಕರ್ನಾಟಕದ ಒಂದೇ ಒಂದು ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜು ಎಂದು ಪ್ರಸಿದ್ಧಿ ಹೊಂದಿರುವ ಹಾಗೂ ರಾಜ್ಯದ ಹೊರ ರಾಜ್ಯಗಳ ಪ್ರತಿಭಾವಂತ ವಿದ್ಯಾರ್ಥಿಗಳು ಬರುವಂತಹ ಸರ್ಕಾರದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಥಮ ಬಾರಿಗೆ ಎಸ್.ಎಫ್.ಐ. ಸದಸ್ಯರು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಸ್ಥಾನವನ್ನು ಗೆದ್ದಿರುತ್ತಾರೆ. ಸುಮಾರು 10 ವರ್ಷಗಳಿಂದ ಸ್ಥಳೀಯ ಹಲವು ವಿದ್ಯಾರ್ಥಿಗಳು ಚುನಾವಣೆಗೆ ಸ್ಪರ್ಧಿಸಿ, ವಿರೋಧವಾಗಿ ಸ್ಪರ್ಧಿಸಲು ಇಚ್ಛಿಸಲಿರುವ ವಿದ್ಯಾರ್ಥಿಗಳಿಗೆ ಸ್ಥಳೀಯ ಗೂಂಡಾಗಳ ಮೂಲಕ ಬೆದರಿಸಿ ನಾಮಪತ್ರ ಸಲ್ಲಿಸಲು ಬಿಡದೆ, ಎಲ್ಲಾ ವಿದ್ಯಾರ್ಥಿಗಳ ವಿರೋಧ ಇದ್ದು, ಅವಿರೋಧವಾಗಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದ ಪ್ರಜಾಪ್ರಭುತ್ವ ವಿರೋಧಿ ಕ್ರಮವನ್ನು ಎಸ್.ಎಫ್.ಐ ಪ್ರಥಮ ಬಾರಿಗೆ ವಿರೋಧಿಸಿ, ಮುಕ್ತ ವಾತಾವರಣದಲ್ಲಿ ಚುನಾವಣೆ ನಡೆಸಲು ಕಲ್ಪಿಸಿಕೊಟ್ಟಿತು. ಸ್ಥಳೀಯ ಗೂಂಡಾ ಶಕ್ತಿಗಳ ಬೆದರಿಕೆಯನ್ನು ಎದುರಿಸಿ, ಎಸ್.ಎಫ್.ಐ. ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಹಾಗೂ ವಿರೋಧಿ ಅಭ್ಯರ್ಥಿಗಳು ಹರಡುತ್ತಿರುವ ಪ್ರಾದೇಶಿಕತೆ ಮತೀಯ ಭಾವನೆಗಳ ವಿರುದ್ಧ ಪ್ರಚಾರ ನಡೆಸಿದ ಫಲವಾಗಿ ವಿದ್ಯಾರ್ಥಿಗಳು ಎಸ್.ಎಫ್.ಐ. ಸದಸ್ಯರನ್ನು ಬಹುಮತದಿಂದ ಆರಿಸಿದುದಕ್ಕೆ ಎಸ್.ಎಫ್.ಐ. ದ.ಕ. ಜಿಲ್ಲಾ ಸಮಿತಿ ವಿದ್ಯಾರ್ಥಿಗಳಿಗೆ ಅಭಿನಂದಿಸುತ್ತಲ್ಲದೆ, ಇದೇ ರೀತಿಯಲ್ಲಿ ಪ್ರತಿ ವರ್ಷ ಮುಕ್ತ ವಾತಾವರಣದಲ್ಲಿ ಚುನಾವಣೆ ನಡೆಸುವ ಮೂಲಕ ವಿದ್ಯಾರ್ಥಿಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕು ಗೊಳಿಸದಂತೆ ವಿದ್ಯಾರ್ಥಿಗಳು ಪ್ರಜ್ಞಾವಂತರಾಗಿರಬೇಕೆಂದು ಎಸ್.ಎಫ್.ಐ. ಕರೆ ನೀಡಿದೆ. ○

ಇಸ್ರೇಲ್ ಅಪಾಯಕಾರೀ ದುಸ್ಸಾಹಸ

“ಇಸ್ರೇಲ್ ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿ ಪಡಿಸುತ್ತಿದೆ ಮತ್ತು ಅದನ್ನು ಪ್ರಯೋಗಿಸುವ ಸಾಧನೆಗಳನ್ನು ಪಡೆಯುತ್ತಿದೆಯೆಂಬುದು ಅತ್ಯಂತ ಅಪಾಯಕಾರಿ. ಈ ದುಸ್ಸಾಹಸ ಇಸ್ರೇಲ್ ಮತ್ತು ಮಾನವ ಕುಲಕ್ಕೆ ಮಾರಕ” ಎಂದು ಇಸ್ರೇಲಿನ ಸಂಸತ್ತು ‘ನೆಸ್ಸೆಟ್ಟ್’ನಲ್ಲಿ ಮಾತನಾಡುತ್ತ ಖಂಡಿಸಿದ ಇಸ್ರೇಲ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮೈರ್ ವಿಲ್ನರ್ ಜೆರಿಕೋ-II ಕ್ಷಿಪಣಿಗಳ ಬಗ್ಗೆ ಚರ್ಚೆ ನಡೆಯಬೇಕೆಂದು ಒತ್ತಾಯಿಸಿದ್ದಾರೆ.

ಇಸ್ರೇಲಿನ ಕಮ್ಯುನಿಸ್ಟರು ಮತ್ತು ಇತರ ಪ್ರಗತಿಪರರು ಪರಮಾಣು ಶಸ್ತ್ರ ಸಜ್ಜಿತಗೊಳ್ಳುವ ಇಸ್ರೇಲ್ ಸರ್ಕಾರದ ಪ್ರಯತ್ನ ಇಸ್ರೇಲ್ ಮತ್ತು ಅದರ ನೆರೆ ದೇಶಗಳಿಗೆ ದುರಂತಕಾರಿಯಾಗಬಹುದು ಎಂದು ತೀವ್ರವಾಗಿ ಎಚ್ಚರಿಸುತ್ತಾ ಬಂದಿದೆ. ಜತೆಗೆ ಮಾರ್ಡೆಚ್ಚಾ ವಾನುನು ಎಂಬ ವ್ಯಕ್ತಿಯ ಬಿಡುಗಡೆಗಾಗಿ ನಡೆಯುತ್ತಿರುವ ಆಂದೋಲನ ದಿನೇ ದಿನೇ ವೃದ್ಧಿಗೊಳ್ಳುತ್ತಿದೆ.

ವಾನುನು ಬಹಳ ವರ್ಷಗಳ ಕಾಲ ಇಸ್ರೇಲಿನ ನೆಗೆವ್ ಮರುಳುಗಾಡಿನ ಒಂದು ಗುಪ್ತ ಪರಮಾಣು ಕೇಂದ್ರದಲ್ಲಿ ದುಡಿಯುತ್ತಿದ್ದು ಕೆಲವು ಸಮಯದ ಹಿಂದೆ ಈ ಕೇಂದ್ರದ ಅಪಾಯಕಾರೀ ಚಟುವಟಿಕೆಗಳನ್ನು ಬಯಲಿಗೆಳೆದು ವಿದೇಶಕ್ಕೆ ಓಡಿ ಹೋಗಿದ್ದ. ಆದರೆ ಇಸ್ರೇಲೀ ಗುಪ್ತ ಪಡೆ ಆತನನ್ನು ಅಪಹರಿಸಿ ತಂದು ಸರ್ಕಾರೀ ಗುಪ್ತ ಮಾಹಿತಿಗಳನ್ನು ಉಲ್ಲಂಘಿಸಿದ ಆಪಾದನೆ ಹೊರಿಸಿದೆ. ಜೆರುಸಲೇಂನ ಸದಾ ಪ್ರಖರ ವಿದ್ಯುತ್ ಬೆಳಕಿನಿಂದ ತುಂಬಿದ ಸೆರೆಮನೆಯಲ್ಲಿ ಆತನಿಗೆ ಏಕಾಂತ ವಾಸವಿಧಿಸಲಾಗಿದೆ. ○

ಅಳಪೆ ಬೀಡಿ 14ನೇ ವಾರ್ಷಿಕ ಸಭೆ

ಅಳಪೆ ಪ್ರದೇಶ ಬೀಡಿ ಲೇಬರ್ ಯೂನಿಯನ್ 14ನೇ ವಾರ್ಷಿಕ ಮಹಾಸಭೆ ಕಾ||ಕೆ. ಪೂವಪ್ಪ ಸಾಲಿಯಾನ್‌ರ ಅಧ್ಯಕ್ಷತೆಯಲ್ಲಿ ಸೇರಿತ್ತು. ಗತ ವರ್ಷದ ವರದಿಯನ್ನು ಕಾರ್ಯದರ್ಶಿ ಕಾ||ಕೆ. ಬಾಲಕೃಷ್ಣ ಮಂಡಿಸಿದರು. ಸಿ.ಐ.ಟಿ.ಯು. ರಾಜ್ಯ ಉಪಾಧ್ಯಕ್ಷ ಕಾ. ಮಾಧವ ಸೌತ್‌ಕೆನರಾ ಬೀಡಿ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಕಾ||ಯು.ಬಿ ಲೋಕಯ್ಯ ಇವರು ಮಾತನಾಡಿದರು.

ಪ್ರಸಕ್ತ ಸಾಲಿಗೆ ಕಾ||ಕೆ ಪೂವಪ್ಪ ಸಾಲಿಯಾನ್ (ಅಧ್ಯಕ್ಷ) ಶ್ರೀಮತಿ ಸುಶೀಲ, ಶ್ರೀಧರ ಹಸನಬ್ಬ (ಉಪಾಧ್ಯಕ್ಷರು) ಕೆ.ಬಾಲಕೃಷ್ಣ ಶೆಟ್ಟಿ (ಕಾರ್ಯದರ್ಶಿ) ಶ್ರೀಮತಿ ಜಯಂತಿ, ಸಂಜೀವ, ಶ್ರೀಮತಿ ಲೀಲಾ (ಜೊತೆಕಾರ್ಯದರ್ಶಿ) ಶ್ರೀಮತಿ ಹೇಮಾವತಿ ಕೋಶಾಧಿಕಾರಿಯಾಗಿ ಆಯ್ಕೆಗೊಂಡರು. ಕಾ.ಬಾಲಕೃಷ್ಣ ಸ್ವಾಗತಿಸಿದರು. ●

ರಾಜ್ಯದ ಎಲ್ಲೆಡೆ ರೈತರಿಂದ ಉತ್ಸಾಹದ ಪಿಕೆಟಿಂಗ್

ತುಮಕೂರು ಜಿಲ್ಲೆ

ಸೆಪ್ಟೆಂಬರ್ 12ರಂದು ತುಮಕೂರಿನಲ್ಲಿ ರಸ್ತೆ ರೋಕೋ ಚಳುವಳಿ ನಡೆಸಿದ ರೈತ ಸಂಘದ 242 ರೈತ ಕಾರ್ಮಿಕ, ವಿದ್ಯಾರ್ಥಿ-ಯುವಜನರನ್ನು ಬಂಧಿಸಲಾಯಿತು. ಕಾ.ದಸ್ತಗೀರ್, ಕೆ.ಆರ್. ನಾಯಕ್, ಚನ್ನಪ್ಪ, ಗೋವಿಂದರಾಜು, ಶ್ರೀನಿವಾಸ, ವಿದ್ಯಾರ್ಥಿ ಯುವನಾಯಕರಾದ ಉಮೇಶ್, ಗಂಗಾಧರ್, ರಾಮಚಂದ್ರಯ್ಯ, ಚೆಲುವರಾಜ್, ಮುಂತಾದವರು ರಸ್ತೆ ತಡೆ ಚಳುವಳಿಯ ನಾಯಕತ್ವ ವಹಿಸಿದ್ದರು. ಠಾಣೆಯಲ್ಲಿ ಕಾ.ಚನ್ನಪ್ಪ, ದಸ್ತಗೀರ್ ಮಾತನಾಡಿದರು. ಕಾ. ಗೋವಿಂದರಾಜ್ ಪಿಕೆಟಿಂಗ್ ಯಶಸ್ವಿಗೊಳಿಸಿದಕ್ಕೆ ಅಭಿನಂದಿಸಿದರು.

ಗುಬ್ಬಿ

ಕೆಂಬಾವುಟ ಹಿಡಿದು ನೂರಾರು ರೈತ ಸಂಘದ ಕಾರ್ಯಕರ್ತರು ಸೆ.10 ರಂದು ಕಾ||ಚನ್ನಪ್ಪ, ಗೋವಿಂದರಾಜು ನೇತೃತ್ವದಲ್ಲಿ ಮೆರವಣಿಗೆ ನಡೆಸಿ ತಾಲ್ಲೋಕು ಕಛೇರಿ ಪಿಕೆಟಿಂಗ್ ನಡೆಸಿ ಬಂಧಿತರಾದರು. ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಕಾರ್ಯಕರ್ತರು ಸಹ ಭಾಗವಹಿಸಿದ್ದರು.

ಸಿರಾ

ಸೆಪ್ಟೆಂಬರ್ 8 ರಂದು ತಾಲ್ಲೋಕು ಕಛೇರಿಯನ್ನು ಪಿಕೆಟಿಂಗ್ ನಡೆಸಿದ 119 ರೈತರನ್ನು ಬಂಧಿಸಲಾಯಿತು. ರೈತ ಮುಖಂಡರಾದ ಕಾ.ಗೋವಿಂದರಾಜು, ಎಚ್.ಸಿ.ಚನ್ನಪ್ಪ, ಆರ್. ಶ್ರೀನಿವಾಸ್, ರಾಮಚಂದ್ರ, ಕೆ.ಆರ್. ನಾಯಕ್, ರವರುಗಳು ನೇತೃತ್ವ ನೀಡಿದ್ದರು.

ಚಿಕ್ಕನಾಯಕಹಳ್ಳಿ

ಸೆಪ್ಟೆಂಬರ್ 7ರಂದು ತಾಲ್ಲೋಕು ಕಛೇರಿ ಪಿಕೆಟಿಂಗ್ ನಡೆಸಿದ ರೈತ ಸಂಘದ ಕಾರ್ಯಕರ್ತರನ್ನು ಮುಖಂಡರಾದ ಕಾ.ಎಚ್.ಸಿ.ಚನ್ನಪ್ಪನವರನ್ನು ಬಂಧಿಸಲಾಯಿತು.

ಬಿದರ್ ಜಿಲ್ಲೆ

ಸೆಪ್ಟೆಂಬರ್ 10 ರಂದು ಬಿದರ್‌ನ ನಗರ ಸಭೆ ಮುಂಭಾಗದಿಂದ ಹೊರಟ ಮೆರವಣಿಗೆಯಲ್ಲಿ ರೈತರು ಅತ್ಯಂತ ಉತ್ಸಾಹದಿಂದ ಸುಡುವ ಬಿಸಿಲಿನಲ್ಲಿಯೇ ಸುಮಾರು 400 ಜನರು ಭಾಗವಹಿಸಿದ್ದರು. ಜಿಲ್ಲಾಧಿಕಾರಿ ಕಛೇರಿ ತಲುಪಿದ ರೈತರು ಪಿಕೆಟಿಂಗ್ ನಡೆಸಿ 57 ಜನ ದಸ್ತಗಿರಿಯಾದರು. ಕಾ.ಸಂಗ್ರಾಮ್ ಕಾ.ವಿಠಲರಾವ್ ಜಾಶೆಟ್ಟಿಪುರ ಹಾಗೂ ಕಾ.ಈಶ್ವರ ಅಮಾಲಪುರ, ಪುಂಡಲೀಕ ಅವಾಲಾಪುರ, ಶ್ರೀಓಂಕಾರಸ್ವಾಮಿ, ನಾರಾಯಣ, ಮುಂದಾಳತ್ವ ವಹಿಸಿದ್ದರು. ಸೆಪ್ಟೆಂಬರ್ 8 ಮತ್ತು 9 ರಂದು ಕಮಠಾಣ ಅಣದೂರ, ಅಮಲಾಪುರ, ಸಿಕಿಂದ್ರಾಪುರ, ಕೋಳಾರ, ಅಷ್ಟುರ, ಸುಲ್ತಾಪುರ, ಮಲಕಾಪುರ, ಅಮಲಾಪುರ, ಗ್ರಾಮಗಳಲ್ಲಿ ಗ್ರಾಮಸಭೆಗಳನ್ನು ನಡೆಸಲಾಗಿತ್ತು.

ಬಸವ ಕಲ್ಯಾಣ

ಬಸವ ಕಲ್ಯಾಣ ತಾಲ್ಲೋಕಿನಲ್ಲಿ ರೈತರು ಬಸ್‌ಸ್ಟಾಂಡಿನಿಂದ ಮೆರವಣಿಗೆಯಲ್ಲಿ ತಹಸೀಲ್ದಾರ್ ಕಛೇರಿ ತಲುಪಿ 300 ರೈತರು 20 ಮಹಿಳೆಯರು ಸೇರಿ ಪಿಕೆಟಿಂಗ್ ನಡೆಸಿದರು. ಸಾವಿರಾರು ಜನರು ಮೆರವಣಿಗೆ ವೀಕ್ಷಿಸಿದರು. ನಂತರ ತಹಸೀಲ್ದಾರ್‌ರಿಗೆ ಮನವಿ ಅರ್ಪಿಸಲಾಯಿತು.

ರಾಯಚೂರು ಜಿಲ್ಲೆ

ಗಂಗಾವತಿ

ತಾಲ್ಲೋಕಿನ ರೈತರು ಸೆಪ್ಟೆಂಬರ್ 7 ರಂದು ತಹಸೀಲ್ದಾರ್‌ರಿಗೆ ತಾಲ್ಲೋಕು ಸಂಚಾಲಕರ ನೇತೃತ್ವದಲ್ಲಿ ರೈತರ ಬೇಡಿಕೆಗಳ ಮನವಿ ಪತ್ರವನ್ನು ಅರ್ಪಿಸಿ ಪಿಕೆಟಿಂಗ್ ನಡೆಸಲಾಯಿತು.

ಸಿಂಧನೂರು

ಸಿಂಧನೂರಿನಲ್ಲಿ ರೈತರು ವಿದ್ಯಾರ್ಥಿಗಳನ್ನೊಳಗೊಂಡು ಪಿಕೆಟಿಂಗ್ ನಡೆಸಿದ 45ಮಂದಿ ರೈತರನ್ನು ಬಂಧಿಸಲಾಯಿತು ಕಾ.ಮಾಲಿಪಾಟೀಲ ಮತ್ತು ಬಸವರಾಜ್ ನೇತೃತ್ವ ವಹಿಸಿದ್ದರು.

ಶಿವಮೊಗ್ಗ ಜಿಲ್ಲೆ

ಸೆಪ್ಟೆಂಬರ್ 11 ರಂದು ಭದ್ರಾವತಿಯಲ್ಲಿ ರೈತರು ಕಾರ್ಮಿಕರು ಮೆರವಣಿಗೆ ನಡೆಸಿ ತಾಲ್ಲೋಕು ಕಛೇರಿ ಮುಂದೆ ಸತ್ಯಾಗ್ರಹ ನಡೆಸಿದರು. ಕಾರ್ಮಿಕ ನಾಯಕರಾದ ಕಾ.ನರಸಿಂಹಯ್ಯ, ಶೇಕಪ್ಪಾ, ಶಿವಶಂಕರ್, ರಂಗೇಗೌಡ ಕಾ.ಬಸವರಾಜು ಮಾತನಾಡಿದರು. ತಹಸೀಲ್ದಾರ್‌ರಿಗೆ ಮನವಿ ಅರ್ಪಿಸಲಾಯಿತು.

ತೀರ್ಥಹಳ್ಳಿ

ರೈತರು ಹಾಗೂ ಕೃಷಿಕೂಲಿಗಾರರು ಸೆ.7 ರಂದು ಮೆರವಣಿಗೆ ನಡೆಸಿ ತಹಸೀಲ್ದಾರ್ ಕಛೇರಿ ಪಿಕೆಟಿಂಗ್ ನಡೆಸಿ 42 ರೈತರು ಬಂಧನಕ್ಕೊಳಗಾದರು. ರೈತ ಮುಖಂಡ ಕಾ.ಕೆ.ಎಂ.ಶ್ರೀನಿವಾಸ್, ಜಾವಗಲ್, ವಿಜಯಕುಮಾರ್, ರೈತರನ್ನುದ್ದೇಶಿಸಿ ಭಾಷಣ ಮಾಡಿದರು. ಕಾ.ರಾಘವೇಂದ್ರ ಮಹಮ್ಮದ್, ಮಹಮ್ಮದ್ ಇಸ್ಮಾಯಿಲ್ ಪದ್ಮಾವತಿಯಮ್ಮ ನೇತೃತ್ವ ವಹಿಸಿದ್ದರು. 8ಮಂದಿ ನಿರುದ್ಯೋಗಿ ವಿದ್ಯಾವಂತ ಮಹಿಳೆಯರು ಬಂಧನವಾಗಿದ್ದರು.

ಬೆಳಗಾಂ ಜಿಲ್ಲೆ

ದೇವದುರ್ಗ

ಸೆಪ್ಟೆಂಬರ್ 7ರಂದು ತಾಲ್ಲೋಕು ಸಮಿತಿ ನೇತೃತ್ವದಲ್ಲಿ ಪ್ರಧಾನ ಅಂಚೆ ಕಛೇರಿಯನ್ನು ರೈತ ಸಂಘದ ಸ್ವಯಂಸೇವಕರು ಪಿಕೆಟಿಂಗ್ ನಡೆಸಿ ಕೆಲಸ ಸ್ತಬ್ಧಗೊಳಿಸಿದ್ದರು. ಪೋಸ್ಟ್ ಬ್ಯಾಗ್ ಒಳಗೆ ತೆಗೆದುಕೊಂಡು ಹೋಗಲು ಅಧಿಕಾರಿಗಳು ಹಾಗೂ ಪೋಲೀಸರು ಮಾಡಿದ ಪ್ರಯತ್ನವನ್ನು ವಿಫಲಗೊಳಿಸಿ ಯಶಸ್ವಿ ಪಿಕೆಟಿಂಗ್ ಮಾಡಿದ 50 ಮಂದಿ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು. ಸಂ 5 ಗಂಟೆಗೆ ನಡೆದ ಸಭೆಯನ್ನು ಪ್ರಾಂತ್ಯ ರೈತ ಸಂಘದ ತಾಲ್ಲೋಕು ಸಂಚಾಲಕ ಕಾ.ಕರಿಯಪ್ಪ ಮಾತನಾಡಿದರು. ಕೃಷ್ಣಾ ಮೇಲ್ದಂಡೆ ಕಾಲುವೆ ಯೋಜನೆ ಜಾರಿ, ಅರಣ್ಯಭೂಮಿ ಪಟ್ಟ ನೀಡಬೇಕು, ಕಾಮಗಾರಿ ಕೆಲಸ ಆರಂಭಗೊಳಿಸಲು ಒತ್ತಾಯಿಸುವ ಘೋಷಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

[6ನೇ ಪುಟ ನೋಡಿ]

ಸಮ್ಮಿಶ್ರ ಸರ್ಕಾರವೇ ಅಥವಾ ಸಾಮೂಹಿಕ ಆಂದೋಲನವೇ ?

ಕಾ|| ಇ. ಎಂ. ಎಸ್. ನಂಬೂದಿರಿಪಾದ್

"ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಸಮ್ಮಿಶ್ರ ಸರ್ಕಾರ ವಿರುವುದು ಸಾಧ್ಯವಿದ್ದರೆ ಕೇಂದ್ರದಲ್ಲೇಕೆ ಅದು ನಮಗೆ ಸಾಧ್ಯವಿಲ್ಲ" ಎಂದು ತೆಲುಗು ದೇಶಂನ ಮುಖಂಡ ಸೆಪ್ಟೆಂಬರ್ 11ರಂದು ಕಲ್ಕತ್ತೆಯಲ್ಲಿ ಹೇಳಿದರು ಎಂದು ಮರುದಿನ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ಅದೇ ಸಭೆಯಲ್ಲಿ ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಜ್ಯೋತಿಬಸು, ಮಾಜೀ ರಕ್ಷಣಾ ಮಂತ್ರಿ ವಿ.ಪಿ. ಸಿಂಗ್ ಮತ್ತು ಇತರ "ಭಿನ್ನಮತೀಯ" ಕಾಂಗ್ರೆಸ್ಸಿಗರು, ಲೋಕದಳ ಮುಖಂಡ ಬಹುಗುಣ ಮತ್ತಿತರರೂ ಮಾತನಾಡಿದರು.

ವಿ.ಪಿ. ಸಿಂಗ್ "ನಿರ್ದಿಷ್ಟ ಪ್ರಶ್ನೆಗಳನ್ನು ಆಧರಿಸಿದ ಆಂದೋಲನ" ನಡೆಸಬೇಕೆಂದು ಕರೆ ನೀಡಿದರು. "ನನ್ನಲ್ಲಿ ಪ್ರಶ್ನೆಗಳಿವೆ. ನಾನು ಹೇಳುವುದೇನೆಂದರೆ–ನೀವು ಈ ಬಗ್ಗೆ ಕಾರ್ಯಾಚರಣೆ ನಡೆಸಿದರೆ ನಾನು ನಿಮ್ಮ ಜತೆಗೂಡುತ್ತೇನೆ. ನಾನು ನಡೆಸಿದರೆ ನೀವು ನನ್ನ ಜತೆಗೂಡಿ" ಎಂದರವರು. ಸದ್ಯದ ವ್ಯವಸ್ಥೆಯನ್ನು ಬದಲಿಸ ಬೇಕೆಂಬ ಬಗ್ಗೆ ಒಪ್ಪಿಗೆಯಿದ್ದರೆ ಮುಂದೆ ಬರಬೇಕೆಂದು ಇದುವರೆಗೆ ತನ್ನನ್ನು ಸೇರಿಕೊಂಡಿಲ್ಲದ ಕಾಂಗ್ರೆಸ್ಸಿಗರೆಲ್ಲರಿಗೂ ಅವರು ಸುಸ್ವಾಗತ ನೀಡಿದರು.

ಹೀಗೆ ವಿ.ಪಿ.ಸಿಂಗ್ ಪ್ರಶ್ನೆ-ಆಧರಿತ ಆಂದೋಲನದ ಬಗ್ಗೆ ಒತ್ತು ನೀಡಿದರೆ, ಉಪೇಂದ್ರ ಕೇಂದ್ರದಲ್ಲಿ ಸಮಿಶ್ರ ಸರಕಾರ ರಚನೆಯ ಕರೆ ನೀಡಿದರು. ಈ ಎರಡರ ನಡುವೆ ಏನಾದರೂ ಸಂಬಂಧ ವಿದೆಯೇಎಂದುನಾವು ಪರಿಶೀಲಿಸಬೇಕು

ವಿವೇಚನೆಯಿಲ್ಲದ ಮಾತು

ಹೀಗೆ ಪರಿಶೀಲಿಸುವಾಗ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿರುವ ಸಮ್ಮಿಶ್ರ ಸರ್ಕಾರದ ನಡುವೆ ಇರುವ ಸ್ಪಷ್ಟ ವ್ಯತ್ಯಾಸವನ್ನು ಮನಗಾಣಬೇಕು. ರಾಜ್ಯ ಸರ್ಕಾರಗಳು ನಿರ್ದಿಷ್ಟ ರಾಜ್ಯಗಳ ಚಟುವಟಿಕೆಗಳ ಕ್ಷೇತ್ರ ಸೀಮಿತಗೊಂಡು ಕಾರ್ಯನಿರ್ವಹಿಸುವ ಸರ್ಕಾರಗಳಾದರೆ ಕೇಂದ್ರದಲ್ಲಿನ ಸರ್ಕಾರ ಇದಕ್ಕಿಂತ ತೀರಾ ಭಿನ್ನ ರೀತಿಯ ಸಮಸ್ಯೆಗಳನ್ನು ಪರಿಹರಿಸಬೇಕಾಗುತ್ತದೆ.

ರಾಜ್ಯಗಳ ರಾಜಕೀಯ ಬಣ್ಣಗಳೂ ವಿಭಿನ್ನವಾಗಿವೆ. ಉಪೇಂದ್ರ ಹೇಳಿರುವ ಎರಡು ರಾಜ್ಯಗಳು ಮತ್ತು ತ್ರಿಪುರಾ ಎಡಪಂಥೀಯ ನೇತೃತ್ವದವು. ಉಪೇಂದ್ರರ ಆಂಧ್ರ ಪ್ರದೇಶ, ಹಾಗೂ ನೆರೆಯ ಕರ್ನಾಟಕವೂ ಸೇರಿದಂತೆ ಉಳಿದ ರಾಜ್ಯಗಳು ಎಡ ಪಂಥೀಯವಲ್ಲದ ಕಾಂಗ್ರೆಸ್ಸೇತರ ಸರ್ಕಾರಗಳನ್ನು ಪಡೆದಿವೆ. ಈ ಎರಡು ರಾಜ್ಯಗಳಲ್ಲಿ ಎಡ ಪಕ್ಷಗಳು ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಕ್ಕಿಂತ ಎಷ್ಟೋ ಪಾಲು ದುರ್ಬಲವಾಗಿವೆ. ಅಲ್ಲಿ ತೆಲುಗು ದೇಶಂ ಮತ್ತು ಜನತಾ ಸರ್ಕಾರಗಳಿಗೆ ವಿಮರ್ಶಾತ್ಮಕ ಬೆಂಬಲ ನೀಡಿದರೂ ಸಿ.ಪಿ.ಐ. (ಎಂ) ಅವುಗಳಲ್ಲಿ ಭಾಗವಹಿಸುತ್ತಿಲ್ಲ.

ಇದಲ್ಲದೆ ಹರ್ಯಾಣದಲ್ಲಿ ಬಿ.ಜೆ.ಪಿ. ಸಖ್ಯತೆ ಪಡೆದ ಲೋಕದಳ ಸರ್ಕಾರವಿದೆ, ಅಸ್ಸಾಂನಲ್ಲಿ ಎ.ಜಿ.ಪಿ. ಸರ್ಕಾರವಿದೆ. ಸಹಜವಾಗಿಯೇ ಸಿ.ಪಿ.ಐ. (ಎಂ) ಗೆ ಇವುಗಳೊಡನೆ ಆಂಧ್ರ ಪ್ರದೇಶ ಮತ್ತು ಕರ್ನಾಟಕ ಸರ್ಕಾರಗಳೊಡನೆ ಹೊಂದಿರುವಂತಹ ಸಂಬಂಧ ಅಸಾಧ್ಯ.

ಹೀಗಿರುವಾಗ ವಿಭಿನ್ನ ರಾಜ್ಯಗಳ ಸಮ್ಮಿಶ್ರ ಸರ್ಕಾರಗಳನ್ನೆಲ್ಲಾ ಒಂದೇ ತಕ್ಕಡಿಯಲ್ಲಿಟ್ಟು ಉಪೇಂದ್ರರಂತೆ ಕೇಂದ್ರದಲ್ಲಿ ಪಶ್ಚಿಮ ಬಂಗಾಳ ಮತ್ತು ಕೇರಳ ಮಾದರಿಯ ಸಮ್ಮಿಶ್ರ ಸರ್ಕಾರ ಸಾಧ್ಯ ಎನ್ನುವುದು ಯುಕ್ತಾ ಯುಕ್ತ ವಿವೇಚನೆಯಿಲ್ಲದ ಮಾತಾಗುತ್ತದೆ.

ವ್ಯತ್ಯಾಸ ಮರೆಯಲಾಗದು

ಉಪೇಂದ್ರರವರು ರಾಜ್ಯಗಳು ಮತ್ತು ಕೇಂದ್ರದ ನಡುವಿನ ಒಂದು ಮಹತ್ವದ ಭಿನ್ನತೆಯನ್ನು ಮರೆತಿದ್ದಾರೆ. ಕೇಂದ್ರ ಸರ್ಕಾರಕ್ಕೆ ವಿದೇಶಾಂಗ ಧೋರಣೆ, ರಕ್ಷಣೆ, ಸಾರಿಗೆ ಸಂಪರ್ಕ, ನಾಣ್ಯ ಮುಂತಾದ ಆರ್ಥಿಕ ವ್ಯವಸ್ಥೆಯ ಮಹತ್ವದ ವಲಯಗಳ ಆಡಳಿತದಲ್ಲಿ ಮತ್ತು ಇಡೀ ದೇಶದಲ್ಲಿನ ಆರ್ಥಿಕ ಹಾಗೂ ಅಭಿವೃದ್ಧಿ ಚಟುವಟಿಕೆಗಳ ಸಂಯೋಜನೆಯಲ್ಲಿ ವಿಶಿಷ್ಟ ಅಧಿಕಾರಗಳಿವೆ. ಈ ಸಮಸ್ಯೆಗಳನ್ನು ಹೇಗೆ ಎದುರಿಸುವುದು ಎಂಬ ಬಗ್ಗೆ ಬಲಪಂಥೀಯ,ಎಡ ಹಾಗೂ ಮಧ್ಯಮ ವರ್ಗದ ಪಕ್ಷಗಳಲ್ಲಿ ಮೂಲ ಭೂತ ಭಿನ್ನಾಭಿಪ್ರಾಯಗಳಿವೆ. ಈ ಭಿನ್ನಾಭಿಪ್ರಾಯಗಳನ್ನು ಸುಲಭವಾಗಿ ಪರಿಹರಿಸಿ ಕೇಂದ್ರದಲ್ಲಿ ಉಪೇಂದ್ರರು ನಿರೀಕ್ಷಿಸುವ ಸಮ್ಮಿಶ್ರ ಸರ್ಕಾರದ ರಚನೆಗೆ ದಾರಿಮಾಡಿಕೊಡಬಹುದಾದ ಒಂದು ಸರ್ವಮಾನ್ಯ ಕಾರ್ಯಕ್ರಮ ವಿಕಾಸಗೊಳಿಸುವುದು ಸಾಧ್ಯ ಎಂದು ನಿರೀಕ್ಷಿಸುವುದು ವ್ಯರ್ಥ. ಅದಕ್ಕಿಂತ ವಿ.ಪಿ. ಸಿಂಗ್ ಹೇಳುವ "ಪ್ರಶ್ನೆ–ಆಧಾರಿತ ಆಂದೋಲನ" ಆರಂಭಿಸುವುದು ಹೆಚ್ಚು ಕಾರ್ಯ ಸಾಧ್ಯವಾದ ವಿಚಾರ.

"ಅಲಿಪ್ತ ನೀತಿ ಹಾಗೂ ಜಾಗತಿಕ ಶಾಂತಿಯ ಧೋರಣೆ ತಳೆಯುವ, ಅಸ್ಥಿರ ಗೊಳಿಸುವ ಸಾಮ್ರಾಜ್ಯಶಾಹೀ ಶಕ್ತಿಗಳಿಂದ ಭಾರತದ ಐಕ್ಯತೆಯನ್ನು ರಕ್ಷಿಸುವ ಒಂದು ಸರ್ಕಾರ ಮಾತ್ರವೇ ಜನತೆಯ ಅವಶ್ಯಕತೆಗಳನ್ನು ಪೂರೈಸಿ, ಅವರಿಗೆ ಸ್ವೀಕಾರಾರ್ಹವಾಗಬಲ್ಲದು" ಎಂದು ಸಿ.ಪಿ.ಐ. (ಎಂ) ನ ಕೇಂದ್ರ ಸಮಿತಿ ಅಗಸ್ಟ್‌ನಲ್ಲಿ ಅಂಗೀಕರಿಸಿದ ರಾಜಕೀಯ ನಿರ್ಣಯ ಹೇಳಿತ್ತು.

ಈ ಬಗ್ಗೆ ಜಾತ್ಯಾತೀತ ನಿಲುವು ತಳೆಯುವ ಹಲವು ಪಕ್ಷಗಳು ಸಿ.ಪಿ.ಐ. (ಎಂ) ನಿಲುವನ್ನು ಒಪ್ಪುತ್ತಿಲ್ಲ. ಅಸ್ಥಿರತೆಯಮಾತು ಕಾಂಗ್ರೆಸ್ಸು ಸೃಷ್ಟಿಸಿರುವ ಸುಳ್ಳು ಬೆದರಿಕೆಯೆಂದು ಅವು ಪರಿಗಣಿಸುತ್ತವೆ. ಅಲಿಪ್ತ ನೀತಿ ಮತ್ತು ಜಾಗತಿಕ ಶಾಂತಿಗಾಗಿ ಹೋರಾಟದ ಪ್ರಶ್ನೆಯ ಮೇಲೂ ಈ ಪಕ್ಷಗಳು ಹಾಗೂ ಸಿ.ಪಿ.ಐ. (ಎಂ) ಮತ್ತಿತರ ಎಡ ಪಕ್ಷಗಳ ನಡುವೆ ಭಿನ್ನಾಭಿಪ್ರಾಯವಿದೆ. ಕೇಂದ್ರದಲ್ಲಿ ಕಾಂಗ್ರೆಸ್ಸಿಗೊಂದು ಪರ್ಯಾಯ ಕಂಡು ಹಿಡಿಯುವ ಸಂದರ್ಭದಲ್ಲಿ ಇಂತಹದೊಂದು ಸಂಬಂಧಪಟ್ಟ ಕ್ಷೇತ್ರದಲ್ಲಿನ ಈ ಭಿನ್ನಾಭಿಪ್ರಾಯಗಳನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ.

ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಮಾರ್ಗದ ಬಗ್ಗೆಯೂ ಎಡ ಪಕ್ಷಗಳು ಮತ್ತು ಇತರ ವಿರೋಧ ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿವೆ. ಕಾಂಗ್ರೆಸ್ ಮೂರು ದಶಕಕ್ಕೂ ಹೆಚ್ಚು ಕಾಲ ಮುಂದುವರಿಸುತ್ತಾ ಬಂದಿರುವ ಬಂಡವಾಳಶಾಹಿಮಾರ್ಗವೇ ದೇಶವನ್ನು ಹಾಳುಗೆಡುವುತ್ತಿರುವುದು ಎಂದು ಎಡ ಪಕ್ಷಗಳು ಹೇಳುತ್ತಾ ಬಂದಿವೆ. ಆದರೆ ಇತರ ವಿರೋಧ ಪಕ್ಷಗಳು ಇದನ್ನು ಒಪ್ಪುವುದಿಲ್ಲ.

ಈ ಎಲ್ಲಾ ಪ್ರಶ್ನೆಗಳು ರಾಜ್ಯ ಸರಕಾರಗಳನ್ನು ನಡೆಸುವಾಗ ಏಳುವುದಿಲ್ಲ; ರಾಜ್ಯ ಮಟ್ಟದ ಸಮಸ್ಯೆಗಳನ್ನು ಎದುರಿಸುವ ಬಗ್ಗೆ ಮಾತ್ರ ಒಮ್ಮತ ಅಲ್ಲಿ ಸಾಕಾಗುತ್ತದೆ. ಆದರೆ ಕೇಂದ್ರದ ವಿಷಯ ಬಂದಾಗ ಮೇಲೆ ಹೇಳಿದ ಹಾಗೂ ಇನ್ನಿತರ ಭಿನ್ನಾಭಿಪ್ರಾಯಗಳನ್ನು ಉಪೇಕ್ಷಿಸುವುದು ಅಸಾಧ್ಯ.

ನಮ್ಮ ದೇಶದಲ್ಲಿ ಕಾಂಗ್ರೆಸ್ (ಐ)ಗೆ ದೃಢವಾದ ಪರ್ಯಾಯವೊಂದು ರೂಪುಗೊಳ್ಳುವುದು ಹೇಗೆ ? ಎಂಬ ಬಗ್ಗೆ ವಿರೋಧ ಪಕ್ಷಗಳಲ್ಲಿ ಎರಡು ಭಿನ್ನ ಭಿನ್ನ ಅಭಿಪ್ರಾಯಗಳಿವೆ. ಯಾವುದು ಸರಿ ಎಂಬ ಬಗ್ಗೆ ವಿಶ್ಲೇಷಣೆ.

ಪ್ರಶ್ನೆ–ಆಧಾರಿತ ಆಂದೋಲನ

ಅಂದರೆ ಇದರರ್ಥ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವೇ ಇಲ್ಲವೆಂದೇನಲ್ಲ. 1983-84 ರಲ್ಲಿ ಬಿ.ಜೆ.ಪಿ.ಯೇತರ ವಿರೋಧ ಪಕ್ಷಗಳಿಗೆ ಪಂಜಾಬ್ ಸಮಸ್ಯೆ, ಕೇಂದ್ರ ರಾಜ್ಯ ಸಂಬಂಧಗಳು ಹಾಗೂ ಸಾಮಾಜಿಕಆರ್ಥಿಕ ಜೀವನದ ಕೆಲವು ಜ್ವಲಂತ ಪ್ರಶ್ನೆಗಳ ಮೇಲೆ ಒಮ್ಮತದ ದಸ್ತಾವೇಜುಗಳನ್ನು ರೂಪಿಸುವುದು ಸಾಧ್ಯವಾಗಿತ್ತು. ಈ ಒಮ್ಮತಗಳಿಂದಾಗಿ ಈ ವರ್ಷದ ಮಾರ್ಚ್ ಚುನಾವಣೆಗಳ ನಂತರ ರಾಷ್ಟ್ರಪತಿ ಚುನಾವಣೆಯಲ್ಲಿ ಸರ್ವಸಮ್ಮತ ವಿರೋಧೀ ಅಭ್ಯರ್ಥಿಯನ್ನು ನಿಲ್ಲಿಸುವುದು ವಿರೋಧ ಪಕ್ಷಗಳಿಗೆ ಸಾಧ್ಯವಾಯಿತು.

ಎಡ ಮತ್ತು ಇತರ ಜಾತ್ಯಾತೀತ ವಿರೋಧ ಪಕ್ಷಗಳ ನಡುವೆ ಐಕ್ಯತೆ ಬೆಳೆಸುವಲ್ಲಿ ವಿ.ಪಿ.ಸಿಂಗ್‌ರವರು ಹೇಳುವ "ನಿರ್ದಿಷ್ಟ ಪ್ರಶ್ನೆಗಳನ್ನಾಧರಿಸಿದ ಆಂದೋಲನ" ನಾಂದಿ ಹಾಕಲು ಸಾಧ್ಯ ಎಂಬುದು ಸ್ಪಷ್ಟ. ಆದರೆ ಕೆಲವು ಪ್ರಶ್ನೆಗಳನ್ನೆತ್ತಿದ್ದಾರೆ. ಈ ಬಗ್ಗೆ ಎಡ ಮತ್ತು ಇತರ ಜಾತ್ಯಾತೀತ ಪಕ್ಷಗಳು ಪ್ರೋತ್ಸಾಹದಾಯಕ ನಿಲುವು ತೋರ್ಪಡಿಸಿವೆ. ಅದೇ ಹೊತ್ತಿಗೆ 1983-84ರ ಬಿ.ಜೆ.ಪಿ. ಯೇತರ ವಿರೋಧ ಪಕ್ಷಗಳ ಸರ್ವ ಸಮ್ಮತ ದಸ್ತಾವೇಜುಗಳನ್ನು ಎಡ ಮತ್ತು ಇತರ ಜಾತ್ಯಾತೀತ ವಿರೋಧ ಪಕ್ಷಗಳು ತಕ್ಷಣ ಕಾರ್ಯಾಚರಣೆಗಿಳಿಯಬಹುದಾದ ಒಂದು ಸರ್ವಸಮ್ಮತ ಕಾರ್ಯಕ್ರಮ ರೂಪಿಸಲು ಬಳಸಿಕೊಳ್ಳಬಹುದು.

ದೃಢ ನಿಲುವು ಅಗತ್ಯ

ಆದರೆ ಎಡ ಪಂಥೀಯವಲ್ಲದ ವಿರೋಧ ಪಕ್ಷಗಳು ಹಾಗೂ ವಿ.ಪಿ. ಸಿಂಗ್ ನೇತೃತ್ವದ ಕಾಂಗ್ರೆಸ್ಸಿಗರು ಒಂದು ವಿಷಯದ ಬಗ್ಗೆ ಸಾಕಷ್ಟು ದೃಢ ನಿಲುವು ತಳೆಯುತ್ತಿಲ್ಲವೇನೋ ಎಂದನಿಸುತ್ತದೆ. ಅದೆಂದರೆ ಜಾತಿವಾದ, ಕೋಮುವಾದ ಮತ್ತು ಇತರ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಟ ಸರ್ವ ಸಮ್ಮತ ಆಂದೋಲನದಲ್ಲಿ ಬಿ.ಜೆ.ಪಿ. ಯ ಸೇರ್ಪಡೆ ಬಗ್ಗೆ ಅವರು ಅಸಮಂಜಸ ನಿಲುವು ತಳೆದಿವೆ. ಸರ್ವ ಸಮ್ಮತ ಆಂದೋಲನದ ಪ್ರಶ್ನೆಗಳ ಬಗ್ಗೆ ಸಮ್ಮತಿ ತೋರಿದರೆ ಬಿ.ಜೆ.ಪಿ.ಯನ್ನು ಕೂಡಾ ಸ್ವಾಗತಿಸಿದರೆ ತೊಂದರೆಯೇನಿಲ್ಲ ಎಂದು ಅವರು ಭಾವಿಸಿದಂತಿದೆ.

ಆದರೆ ಎಡ ಪಕ್ಷಗಳಿಗೆ ಈ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಬಿ.ಜೆ.ಪಿ. ಮಾತ್ರವೇ ಇಲ್ಲ, ಬಹು ಸಂಖ್ಯಾತ ತರ ಅಥವಾ ಅಲ್ಪ ಸಂಖ್ಯಾತರ ಕೋಮುವಾದವನ್ನು "ಮುಂದುವರಿದ" ಅಥವಾ 'ಹಿಂದುಳಿದ' ಜಾತೀವಾದವನ್ನು ಮತ್ತು ಇದೇ ರೀತಿ ಜನರನ್ನು ಭಾಷೆ, ಜನಾಂಗ ಅಥವಾ ಪ್ರದೇಶಗಳ ಹೆಸರಿನಲ್ಲಿ ವಿಭಜಿಸುವ ಸಿದ್ಧಾಂತಗಳು ಹಾಗೂ ಪ್ರವೃತ್ತಿಗಳನ್ನು ಆಧರಿಸಿದ ಬೇರೆ ಯಾವುದೇ ಸಂಘಟನೆ ಅಥವಾ ಪಕ್ಷವನ್ನು ಕೂಡಾ ಇಂತಹದೊಂದು ಸರ್ವ ಸಾಮಾನ್ಯ ಆಂದೋಲನದ ಮಿತ್ರ ಶಕ್ತಿಗಳಾಗಿ ಪರಿಗಣಿಸುವುದು. ಎಂದೂ ಸಾಧ್ಯವೇ ಇಲ್ಲ. ದೇಶವನ್ನು ವಿಘಟನೆಯಿಂದ ರಕ್ಷಿಸಲು ಈ ಎಲ್ಲಾ ಶಕ್ತಿಗಳ ವಿರುದ್ಧ ಯಾವ ರಾಜಿಗೂ ಎಡೆಯಿಲ್ಲದಂತೆ ಹೋರಾಟ ಅತ್ಯಗತ್ಯ.

ಅನುಭವದ ಎಚ್ಚರಿಕೆ

ಜಾತಿವಾದೀ, ಕೋಮುವಾದೀ ಹಾಗೂ ಇತರ ವಿಚ್ಛಿದ್ರಕಾರೀ ಶಕ್ತಿಗಳನ್ನು ಸೇರಿಸಿಕೊಂಡು ರಾಜೀವ್ ಸರ್ಕಾರದ ವಿರುದ್ಧ ಯಶಸ್ವೀ ಹೋರಾಟ ನಡೆಸುವುದು ಸಾಧ್ಯ ಎಂಬ ಹಲವರ ಯೋಚನೆ ಕೇವಲ ಒಂದು ಭ್ರಮೆ. ಕಮ್ಯುನಿಸ್ಟರನ್ನು ಹಾಗೂ ಇತರ ಎಡ ಪಂಥೀಯ ವಿರೋಧೀ ಶಕ್ತಿಗಳನ್ನು ಒಂದಾದ ಮೇಲೊಂದರಂತೆ ಬೇರೆ ಬೇರೆ ರಾಜ್ಯಗಳಲ್ಲಿ ಅಧಿಕಾರಕ್ಕೆ ಬರದಂತೆ ತಡೆಯಲು ಕಾಂಗ್ರೆಸ್ ಜವಾಹರಲಾಲ್ ನೆಹರೂ ಕಾಲದಿಂದಲೇ ಇದೇ ಮಾರ್ಗ ಅನುಸರಿಸಿಕೊಂಡು ಬಂದಿದೆ. ಕೇರಳದಿಂದ 1959 ರಲ್ಲಿ ಆರಂಭವಾದ ಈ ಪ್ರಯೋಗ ಅಲ್ಲಿ ಹಾಗೂ ಇತರ ಹಲವು ರಾಜ್ಯಗಳಲ್ಲೂ ಬೇರೆ ಬೇರೆ ಸ್ವರೂಪಗಳಲ್ಲಿ ಈಗಲೂ ಮುಂದುವರಿಯುತ್ತಿದೆ. ಈಗ ಎಡ ಹಾಗೂ ಇತರ ಜಾತ್ಯಾತೀತ ವಿರೋಧ ಪಕ್ಷಗಳು ನೆಹರೂ ಕಾಲದಿಂದಲೇ ಕಾಂಗ್ರೆಸ್ ಹಿಡಿದಿರುವ ಈ ಮಾರ್ಗವನ್ನು ತಾವೂ ಅನುಸರಿಸಿದರೆ ರಾಜೀವ್ ಗಾಂಧಿ ಸರ್ಕಾರದ ವಿರುದ್ಧ ಹೋರಾಟ ಬಲಗೊಳ್ಳುವುದಿಲ್ಲ ;ಬದಲಾಗಿ, ದುರ್ಬಲಗೊಳ್ಳುತ್ತದೆ.

1977-79 ರ ಅನುಭವ ನಮ್ಮೆದುರಿಗಿದೆ. ಜನತಾಪಕ್ಷ ವಿಫಲ ಗೊಳ್ಳಲು ಅದು ಹಿಂದೂ ಪುನರುತ್ಥಾನವಾದೀ ಜನಸಂಘವೂ ಸೇರಿದ ರಾಜಕೀಯ ಪಕ್ಷಗಳ ಮಿಶ್ರಣವಾಗಿದ್ದುದೇ ಕಾರಣ. ಆ ಪ್ರಯೋಗ ಮಣ್ಣು ಮುಕ್ಕಿದ ಸಂಗತಿ ಒಂದೆಡೆ ಎಡ ಪಕ್ಷಗಳಿಂದ ಹಿಡಿದು ಇನ್ನೊಂದೆಡೆ ಜಾತಿ ಹಾಗೂ ಕೋಮುವಾದಿ ಶಕ್ತಿಗಳವರೆಗೆ ಎಲ್ಲಾ ವಿರೋಧಿ ಪಕ್ಷಗಳು ಹಾಗೂ ಸಂಘಟನೆಗಳನ್ನು ಒಳಗೊಳ್ಳುವ ಒಂದು ಸಮಗ್ರ, ಆಂದೋಲನ ರೂಪಿಸುವ ಪ್ರಯತ್ನದ ವಿರುದ್ಧ ಎಚ್ಚರಿಕೆಯಾಗಬೇಕು. ಈಗ ಸಾಧ್ಯವಿರುವುದು ಮತ್ತು ಅಗತ್ಯವಾಗಿರುವುದು, ಎಡಪಕ್ಷಗಳು, ಇತರ ಜಾತ್ಯಾತೀತ ವಿರೋಧ ಪಕ್ಷಗಳು ಹಾಗೂ ಇಂದು ವಿ.ಪಿ.ಸಿಂಗ್‌ರ ನೇತೃತ್ವದಲ್ಲಿರುವ ಭ್ರಮನಿರಸನಗೊಂಡ ಕಾಂಗ್ರೆಸ್ಸಿಗರು ಪರಸ್ಪರ ಹತ್ತಿರ ಬರುವುದು. ಇದನ್ನು ವಿ.ಪಿ.ಸಿಂಗ್‌ರವರು ಒತ್ತಿ ಹೇಳಿರುವಂತೆ "ನಿರ್ದಿಷ್ಟ ಪ್ರಶ್ನೆಗಳನ್ನು" ಆಧರಿಸಿದ ಆಂದೋಲನ"ವನ್ನು ಪ್ರಾರಂಭಿಸುವ ಮೂಲಕವೇ ಆರಂಭಿಸಬೇಕಾಗಿದೆ.

ಆದರೆ ಎಡ ಪಕ್ಷಗಳಿಗೆ ಈ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಬಿ.ಜೆ.ಪಿ.ಮಾತ್ರವೇ ಇಲ್ಲ, ಬಹುಸಂಖ್ಯಾತ ಅಥವಾ ಅಲ್ಪ ಸಂಖ್ಯಾತರ ಕೋಮುವಾದದವನ್ನು, "ಮುಂದುವರಿದ" ಅಥವಾ 'ಹಿಂದುಳಿದ' ಜಾತೀವಾದವನ್ನು ಮತ್ತು ಇದೇ ರೀತಿ ಜನರನ್ನು ಭಾಷೆ, ಜನಾಂಗ ಅಥವಾ ಪ್ರದೇಶಗಳ ಹೆಸರಿನಲ್ಲಿ ವಿಭಜಿಸುವ ಸಿದ್ಧಾಂತಗಳು ಹಾಗೂ ಪ್ರವೃತ್ತಿಗಳನ್ನು ಆಧರಿಸಿದ ಬೇರೆ ಯಾವುದೇ ಸಂಘಟನೆ ಅಥವಾ ಪಕ್ಷವನ್ನು ಕೂಡಾ ಇಂತಹದೊಂದು ಸರ್ವ ಸಾಮಾನ್ಯ ಆಂದೋಲನ ಮಿತ್ರಶಕ್ತಿಗಳಾಗಿ ಪರಿಗಣಿಸುವುದು ಎಂದೂ ಸಾಧ್ಯವೇ ಇಲ್ಲ. ದೇಶವನ್ನು ವಿಘಟನೆಯಿಂದ ರಕ್ಷಿಸಲು ಈ ಎಲ್ಲಾ ಶಕ್ತಿಗಳ ವಿರುದ್ಧ ಯಾವ ರಾಜಿಗೂ ಎಡೆಯಿಲ್ಲದಂತೆ ಹೋರಾಟ ಅತ್ಯಗತ್ಯ.

ಕಾಡ್ಗಿಚ್ಚಿನ ವಿರುದ್ಧ ಹೋರಾಟ

ಚೀನಾದಲ್ಲಿ ಕೆಲವು ತಿಂಗಳುಗಳ ಹಿಂದೆ ಭಾರಿ ಕಾಡ್ಗಿಚ್ಚೊಂದು ಅಪಾರ ಕಷ್ಟನಷ್ಟ ತಂದೊಡ್ಡಿತು. ಮೇ 6 ರಂದು ಆರಂಭವಾದ ಈ ಕಾಡ್ಗಿಚ್ಚು ಜೂನ್ 2 ರ ವರೆಗೆ ಭಾರಿ ದೊಡ್ಡ ಪ್ರಮಾಣದಲ್ಲಿ ವಿಸ್ತಾರವಾದ ಕ್ಷೇತ್ರಕ್ಕೆ ಹಬ್ಬಿತ್ತು. ಚೀನಾದ ಉತ್ತರ ಗಡಿಯಲ್ಲಿರುವ "ಹಸಿರು ನಿಧಿ" ಎಂದು ಹೆಸರಾದ ಹಿಂಗ್ಗನ್ ಪರ್ವತಶ್ರೇಣಿಯಲ್ಲಿರುವ ಸದಾ ಹಸಿರು ಕಾಡುಗಳಲ್ಲಿ ಈ ಕಾಡ್ಗಿಚ್ಚು ಆಕಸ್ಮಾತ್ತಾಗಿ ಆರಂಭವಾಯಿತು. ಚೀನಾದ ಮರತೋಪುಗಳಲ್ಲಿ ಶೇಕಡಾ 15.6ರಷ್ಟು ಪೂರೈಕೆ ಮಾಡುವ ಈ ಕಾಡು ಸುಮಾರು 1.3 ಕೋಟಿ ಹೆಕ್ಟೇರುಗಳಷ್ಟು ಕ್ಷೇತ್ರವನ್ನಾವರಿಸಿದೆ.

ಕಾಡ್ಗಿಚ್ಚು ಆರಂಭವಾದ ಜಾಗದಿಂದ ಪಶ್ಚಿಮ ಪೂರ್ವ ಎರಡು ದಿಕ್ಕಿನಲ್ಲಿ, ಭಾರಿ ಗಾಳಿಯಿಂದಾಗಿ ಹಬ್ಬಿತು. ಕೆಲವು ದಿನಗಳಲ್ಲಿ 250ಕಿ.ಮೀ ನಷ್ಟು ಉದ್ದದ ಪ್ರದೇಶವನ್ನು ಅದು ಆವರಿಸಿತ್ತು. ಸುಮಾರು10ಲಕ್ಷ ಎಕ್ರೆ ಕಾಡು ನಾಶವಾಗಿ ಹೋಯಿತು. 193 ಜನ ಸತ್ತರು. 226 ಜನರು ತೀವ್ರವಾಗಿ ಗಾಯಗೊಂಡರು. 50000ಜನ ಮನೆ ಕಳೆದುಕೊಂಡರು. ನೇರವಾದ ಆರ್ಥಿಕ ನಷ್ಟ ಸುಮಾರು 50 ಕೋಟಿ ಯುವಾನ್(ಚೀನಾದ ನಾಣ್ಯ)

ಕ್ರಾಂತಿ ಪೂರ್ವದಲ್ಲಿ ಪ್ರಕೃತಿ ಪ್ರಕೋಪಗಳ ಬೀಡಾಗಿದ್ದ ಚೀನಾದಲ್ಲಿ ಕ್ರಾಂತಿಯ ನಂತರ ಇದು ಅತ್ಯಂತ ದೊಡ್ಡ ದುರಂತವೆನ್ನಬಹುದು. ಈ ದುರಂತವನ್ನು ಸಮಾಜವಾದಿ ಚೀನಾ ಹೇಗೆ ಎದುರಿಸಿತು ಮತ್ತು ಇದರಿಂದ ಏನು ಪಾಠ ಕಲಿತಿದೆ ಎಂಬುದು ಮುಖ್ಯ. ಹಿಂದೆ ಜನರ ಸಂಪೂರ್ಣ ಭಾಗವಹಿಸುವಿಕೆಯಿಂದ ನೆರೆ, ಭೂಕಂಪ ಮುಂತಾದವುಗಳನ್ನು ಎದುರಿಸುವುದರಲ್ಲಿ ಚೀನಾ ಮೇಲ್ಪಂಕ್ತಿ ಹಾಕಿತ್ತು.

ಕಾಡ್ಗಿಚ್ಚಿನ ಸುದ್ದಿ ಗೊತ್ತಾದಂತೆ ಕಾಡಿನ ರೇಂಜರ್ಸ್, ಇತರ ಸಿಬ್ಬಂದಿ ಜನತಾ ವಿಮೋಚನಾ ಸೇನೆಯ ಸೈನಿಕರು ಸುಮಾರು 30000 ಕ್ಕಿಂತಲೂ ಹೆಚ್ಚು ಕಾಡ್ಗಿಚ್ಚನ್ನು ತಡೆಯುವ ಹೋರಾಟದಲ್ಲಿ ಹಿಂದಿನ ಅದೇ ಕ್ರಾಂತಿಕಾರಿ ಉತ್ಸಾಹ, ತ್ಯಾಗ ಭಾವನೆಯಿಂದ ಧುಮುಕಿದರು. ದುರಂತದ ಪ್ರಮಾಣ, ಆಕಸ್ಮಿಕತೆ ಮತ್ತು ಅಗ್ನಿ ಶಾಮಕ ಉಪಕರಣಗಳ ಅಭಾವ, ತರಬೇತಿಯ ಅಭಾವ ಇತ್ಯಾದಿಗಳಿಂದ ಕಷ್ಟಕರ ಕೆಲಸವಾಗಿತ್ತು. ಕೆಲವು ಕಡೆ ಹಲವು ದಿನಗಳು ನಿದ್ದೆ ಇಲ್ಲದೆ ಕಾಡ್ಗಿಚ್ಚಿನ ವಿರುದ್ಧ ಹೋರಾಡ ಬೇಕಾಯಿತು. ಹಲವು ಕಡೆ "ಅಗ್ನಿ ತಡೆ"ಗಳನ್ನು ನಿರ್ಮಿಸಲು ಹಾರೆ ಪಿಕ್ಕಾಸಿಗಳಂತಹ ಸರಳ ಉಪಕರಣಗಳನ್ನು ಬಿಟ್ಟರೆ ಬೇರೆನೂ ಇರಲಿಲ್ಲ.

ಕಾಡ್ಗಿಚ್ಚಿನ ವಿರುದ್ಧ ಹೋರಾಟದಲ್ಲಿ ಚೀನಾದ ಇತರ ಭಾಗಗಳ ಜನರು ದೊಡ್ಡ ಪ್ರಮಾಣದಲ್ಲಿ ಪರಿಹಾರ ಸಾಮುಗ್ರಿಗಳನ್ನು ಸಂಗ್ರಹಿಸುವುದರಲ್ಲಿ ಸ್ಥಳಗಳಿಗೆ ಪೂರೈಸುವುದರಲ್ಲಿಅಗ್ನಿಯ, ವಿರುದ್ಧ ನೇರ ಹೋರಾಟದಲ್ಲಿ ಹಲವು ಹತ್ತು ರೀತಿಯಲ್ಲಿ ಭಾಗವಹಿಸಿದರು.

ತಮ್ಮ ಪ್ರಾಣ ತೆತ್ತು ಸಾರ್ವಜನಿಕ ಸ್ವತ್ತು ರಕ್ಷಿಸಿದ, ಅಪ್ರತಿಮ ಪರಾಕ್ರಮದ ಉದಾಹರಣೆಗಳು ಹಲವು. ಸಿಲಿಂಜಿ ಪಟ್ಟಣದ ಹತ್ತಿರ ಕಾಡ್ಗಿಚ್ಚು ಬರುತ್ತಿದ್ದಂತೆ, ತೈಲ ಡಿಪೋವನ್ನು ರಕ್ಷಿಸುವುದು ಅತ್ಯಂತ ಮುಖ್ಯ ಕೆಲಸವಾಗಿತ್ತು ಡಜನುಗಟ್ಟಲೆ. ಸೈನಿಕರು ನೀರಲ್ಲಿ ತಮ್ಮನ್ನುಅದ್ದಿಕೊಂಡು ತೈಲ ಟ್ಯಾಂಕ್ ಸುತ್ತ ಮಾನವ ಕಂಬಳಿಯೊಂದನ್ನು ರಚಿಸಿ. ಅದು ಸ್ಫೋಟಗೊಳ್ಳದಂತೆ ರಕ್ಷಿಸಿದರು. ಜನರನ್ನು ರಕ್ಷಿಸಲು

ವಿಶ್ವದ ಎರಡು ದೊಡ್ಡ ಸಮಾಜವಾದಿ ದೇಶಗಳಾದ ಸೋವಿಯೆತ್ ದೇಶ ಹಾಗೂ ಚೀನಾದಲ್ಲಿ ಇತ್ತೀಚೆಗೆ ಎರಡು ದುರಂತಗಳು ಸಂಭವಿಸಿದವು. ಒಂದು ಚೆರ್ನೋಬಿಲ್ ಮತ್ತೊಂದು ಚೀನಾದ ಅರಣ್ಯಗಳಲ್ಲಿ ಬೃಹತ್ ಕಾಡ್ಗಿಚ್ಚು ಎರಡು ದೇಶಗಳು ಇದನ್ನು ಹೇಗೆ ಎದುರಿಸಿದುವು.

ಕಾಡ್ಗಿಚ್ಚು ಹರಡುತ್ತಿರುವ ಕ್ಷೇತ್ರಗಳಿಂದ ಸುರಕ್ಷಿತ ಕ್ಷೇತ್ರಗಳಿಗೆ ಸಾಗಿಸುವಲ್ಲಿ ತಮ್ಮ ಪ್ರಾಣ ಲೆಕ್ಕಿಸದೆ ಹಲವಾರು ಟ್ರಕ್ ಡ್ರೈವರ್‌ಗಳು ಹೆಲಿಕಾಪ್ಟರ್ ಪೈಲಟ್‌ಗಳು ಹಗಲಿರುಳೆನ್ನದೆ ದುಡಿದರು.

ನಿರಾಶ್ರಿತರಾದ ಸಾವಿರಾರು ಜನರ ಪುನರ್ವಸತಿ ಕೆಲಸವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಮಾಡಲಾಗಿದೆ. ಈ ಅಗ್ನಿ ದುರಂತ ಜನರ ಕ್ರಾಂತಿಕಾರಿ ಉತ್ಸಾಹ ಮಾತ್ರವಲ್ಲದೆ ಚೀನಾದ ಆಡಳಿತದ ಹಲವು ಲೋಪದೋಷಗಳನ್ನು ಮುಂದೊಡ್ಡಿದೆ. ಕಾಡಿನಲ್ಲಿ ಕೆಲಸ ಮಾಡುವವರಿಗೆ ಅಗತ್ಯವಾದ ತರಬೇತಿ, ಸುರಕ್ಷಿತೆಯ ಜ್ಞಾನದ ಅಭಾವ; ಅಗ್ನಿ ಶಾಮಕ ತಂತ್ರಗಳ ಉಪಕರಣಗಳ ಸಿಬ್ಬಂದಿ ತರಬೇತಿಗಳಲ್ಲಿ ನ್ಯೂನತೆಗಳು ಈ ಅಗ್ನಿ ದುರಂತದ ಹಾನಿಗೆ ಕಾರಣವೆನ್ನಲಾಗಿದೆ. ಇವುಗಳಿಗೆ ಅಧಿಕಾರಶಾಹಿಯ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯ ಕಾರಣವೆನ್ನಲಾಗಿದೆ. ಇದಕ್ಕಾಗಿ ಅರಣ್ಯ ಖಾತೆಯ ಮಂತ್ರಿ ಮತ್ತು ಉಪ ಮಂತ್ರಿಗಳನ್ನು ಪದಚ್ಯುತಿ ಮಾಡಲಾಗಿದೆ. ಅಧಿಕಾರಶಾಹಿಯನ್ನು ಸುಧಾರಿಸುವ, ಜನರ ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸುವಂತೆ ಮಾಡುವ ಹೋರಾಟದಲ್ಲಿ ಇದು ಪ್ರಮುಖ ಹಂತವೆನ್ನಲಾಗಿದೆ. ಈ ರೀತಿಯ ಕಠಿಣ ಕ್ರಮ ಹಿಂದೆಂದೂ ತೆಗೆದುಕೊಂಡಿದ್ದಿಲ್ಲ. ಇದಲ್ಲದೆ ಎಲ್ಲಾ ಹಂತಗಳಲ್ಲಿ ದುರಂತಕ್ಕೆ ಜವಾಬ್ದಾರರಾದವರನ್ನು ಶಿಕ್ಷಿಸಲು ವಿಚಾರಣೆಗಳು ನಡೆಯುತ್ತಿವೆ. ಸಮಾಜವಾದಿ ವ್ಯವಸ್ಥೆ ತನ್ನ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಬಲ್ಲದು ಎನ್ನುವುದಕ್ಕೆ ಇದು ಸಾಕ್ಷಿ.

> "ಹಿಂಗ್ಗನ್ ಪರ್ವತ ಶ್ರೇಣಿಯ ಭಾರಿ ಕಾಡ್ಗಿಚ್ಚನ್ನು ಆರಿಸಲಾಗಿದೆ. ಆದರೆ ಇನ್ನೊಂದು ಕಾಡ್ಗಿಚ್ಚಿನಂತೆ ಹಬ್ಬುತ್ತಿದೆ-ಅಧಿಕಾರಶಾಹಿ ವರ್ತನೆಗಳ ವಿರುದ್ಧ ವ್ಯಾಪಕ ಟೀಕೆ.
>
> 1949 ರಿಂದೀಚೆಗಿನ ಭಾರಿ ಅಗ್ನಿ ದುರಂತಕ್ಕೆ—ತಪ್ಪಾದ ನಿರ್ವಹಣೆ, ಶಿಸ್ತಿನ ಅಭಾವ ಮತ್ತು ನಿಯಮಗಳ ಉಲ್ಲಂಘನೆಗಳು ಕಾರಣವೇನೋ ನಿಜ. ಆದರೆ ಮುಖ್ಯ ಕಾರಣ ಹಿರಿಯ ಅಧಿಕಾರಿಗಳ ಅಧಿಕಾರಶಾಹಿ ಕೆಲಸದ ಶೈಲಿ ಎಂಬುದು ಸ್ಪಷ್ಟ.
>
> China Reconstructs (ಚೀನಾ ಪುನರ್ರಚಿಸುತ್ತಿದೆ) ನ ಸಂಪಾದಕೀಯದಿಂದ.

ಚೆರ್ನೋಬಿಲ್ ಅಪರಾಧಿಗಳಿಗೆ ಶಿಕ್ಷೆ

ಜುಲೈ 7 ರಂದು ಆರಂಭವಾಗಿ 16 ಅಧಿವೇಶನಗಳಲ್ಲಿ ಜರುಗಿದ ಚೆರ್ನೋಬಿಲ್ ದುರಂತ ಆಪಾದಿತರ ವಿಚಾರಣೆ ಮುಗಿದು ಆಪಾದಿತರನ್ನು ತಪ್ಪಿತಸ್ಥರೆಂದು ಘೋಷಿಸಲಾಗಿದೆ. ಚೆರ್ನೋಬಿಲ್ ಅಣುಶಕ್ತಿ ಸ್ಥಾವರದ ನಿರ್ದೇಶಕ ಬ್ರೈಖನೋವ್‌ಗೆ 10 ವರ್ಷದ ಸಜೆ ವಿಧಿಸಲಾಗಿದೆ.ಮುಖ್ಯ ಇಂಜಿನೀಯರ್ ಫೋಮಿನ್ ಮತ್ತು ಸಹಾಯಕ ಡಯತ್ಲೋವ್‌ರಿಗೂ 10 ವರ್ಷದಸಜೆ ಕೊಡಲಾಗಿದೆ. ಪಾಳಿಯ ಮುಖ್ಯಸ್ಥ ರೋಗೋಝಿನ್‌ಗೆ5 ವರ್ಷಗಳಿಗೂ, 2ನೇ ರಿಯಾಕ್ಟರ್‌ನ ಮುಖ್ಯಸ್ಥ ಕೊವಲೆಂಕೊಗೆ 3 ವರ್ಷಗಳಿಗೂ ಶಿಕ್ಷೆ ವಿಧಿಸಲಾಗಿದೆ. ಅಣು ಶಕ್ತಿ ನಿರೀಕ್ಷಕ ಆಯೋಗದ ಇನ್‌ಸ್ಪೆಕ್ಟರ್ ಲವ್‌ಶ್ಕಿನ್‌ಗೂ 2 ವರ್ಷದ ಸಜೆ ವಿಧಿಸಲಾಗಿದೆ.

ಆಪಾದಿತರ ಮೇಲೆ ಹೊರಿಸಲಾಗಿದ್ದ ನಿಯಮಗಳ ಉಲ್ಲಂಘನೆ, ನಿರ್ಲಕ್ಷ್ಯ, ಬೇಜವಾಬ್ದಾರಿ, ಸ್ಥಾವರದ ಸಿಬ್ಬಂದಿಯ ತರಬೇತಿ ಮತ್ತು ಸುರಕ್ಷಿತತೆಯ ನಿಯಮ ಪಾಲನೆಯ ಮೇಲುಸ್ತುವಾರಿಯ ಅಭಾವ ಮುಂತಾದ ಆಪಾದನೆಗಳು ಸಿದ್ಧವಾಗಿವೆ.

ಡೈರೆಕ್ಟರ್ ಮತ್ತು ಮುಖ್ಯ ಇಂಜಿನೀಯರ್ ವಿರುದ್ಧ ಅಣು ಸ್ಥಾವರದ ಸಿಬ್ಬಂದಿ ಮತ್ತು ಪಟ್ಟಣದ ಜನತೆಯನ್ನು ಸುರಕ್ಷಿತ ಪ್ರದೇಶಗಳಿಗೆ ತತ್‌ಕ್ಷಣ ರವಾನೆ ಮಾಡುವಲ್ಲಿ ವಿಳಂಬ ಮಾಡಿದ್ದ ಆಪಾದನೆ ಸಾಬೀತಾಗಿದೆ. ಮೇಲಧಿಕಾರಿಗಳಿಗೆ ತಪ್ಪು ಮಾಹಿತಿ (ವಿಕಿರಣ ಮಟ್ಟದ ಬಗ್ಗೆ) ಕೊಟ್ಟಿರುವುದೂ ಸಾಬೀತಾಗಿದೆ.

ವಿಚಾರಣೆ ದುರಂತದ ತಾಂತ್ರಿಕ ಕಾರಣಗಳನ್ನು ಕೂಲಂಕುಷವಾಗಿ ವಿಶ್ಲೇಷಿಸಿದೆ. ಒಂದು ಪ್ರಯೋಗಕ್ಕಾಗಿ ಹಲವು ಹಂತದ ಆಪತ್ಕಾಲೀನ ಸುರಕ್ಷಿತಾ ಕ್ರಮಗಳನ್ನು ಉಪಕರಣಗಳನ್ನು ಉಪಯೋಗಿಸದೆ ಇದ್ದುದು ಮುಖ್ಯ ಕಾರಣವೆಂಬ ತೀರ್ಮಾನಕ್ಕೆ ಬಂದಿದೆ. ಇಂತಹ ಪ್ರಯೋಗವನ್ನು ಇದಕ್ಕಿಂತ ಮೊದಲು 3-4 ಬಾರಿ ಇಷ್ಟೇ ನಿರ್ಲಕ್ಷ್ಯದಿಂದ ಮಾಡಿದ್ದನ್ನೂ ವಿಚಾರಣೆ ಪತ್ತೆ ಹಚ್ಚಿದೆ. ಅಂದರೆ ಮಾನವ ತಪ್ಪುಗಳೂ ಈ ದುರಂತಕ್ಕೆ ಕಾರಣ, ಮತ್ತು ಈ ತಪ್ಪು ತಡೆಗಟ್ಟಬಹುದಾದದ್ದು, (ಅನಿವಾರ್ಯವಾಗಿರಲಿಲ್ಲ.) ಒಂದು ದೊಡ್ಡ ಅಣುಸ್ಥಾವರಕ್ಕೆ ತಕ್ಕುದಾದ ತಾಂತ್ರಿಕ ಶಿಸ್ತು, ಜವಾಬ್ದಾರಿಯಲ್ಲಿ ನ್ಯೂನತೆಗಳಿವೆ ಎಂದು ಸಹ ತೀರ್ಪು ಹೇಳುತ್ತದೆ. ಸಿಬ್ಬಂದಿಯ ತರಬೇತಿಯಲ್ಲಿ ಬಹಳಷ್ಟು ಸುಧಾರಣೆಗಳನ್ನು ತೀರ್ಪು ಸೂಚಿಸಿದೆ. ತರಬೇತಿ Simulators ಗಳ ಉಪಯೋಗ ಇದರಲ್ಲಿ ಮುಖ್ಯವಾದದ್ದು.

ಚೆರ್ನೋಬಿಲ್ ವಿಚಾರಣೆಗಳನ್ನು ಇಡೀಜಗತ್ತೇ ಕುತೂಹಲದಿಂದ ಗಮನಿಸುತ್ತಿತ್ತು. ಬಂಡವಾಳಶಾಹಿ ಜಗತ್ತಿನ ಪತ್ರಿಕೆ, ಪ್ರಸಾರ ಮಾಧ್ಯಮಗಳು ಇಂತಹ ತಪ್ಪುಗಳು ಸಮಾಜವಾದಿ ವ್ಯವಸ್ಥೆಯ ಅನಿವಾರ್ಯ ಅಂಗ ಎಂಬ ಅಪಪ್ರಚಾರ ಮಾಡುತ್ತಿದ್ದವು. ಚೆರ್ನೋಬಿಲ್ ತೀರ್ಪು ಇವರ ಬಾಯಿಗೆ ಬೀಗ ಬಡಿದಿದೆ. ಇಂತಹ ಘೋರ ನಿರ್ಲಕ್ಷಕ್ಕೆ ಸಮಾಜವಾದಿವ್ಯವಸ್ಥೆ ತಕ್ಕ ಶಿಕ್ಷೆ ನೀಡುತ್ತದೆ ಎಂದು ಸಾಬೀತು ಮಾಡಿದೆ. ವಿಚಾರಣೆಯ ಸಮಯದಲ್ಲಿ ಮುಕ್ತ ವಾತಾವರಣ ಸೋವಿಯೆತ್ ರಶ್ಯಾದ ಹೊಸ ನಾಯಕತ್ವದ ಹೊಸ ನೀತಿಗಳ ಪೂರ್ಣ ಜಾರಿಯ ಫಲ ಎನ್ನಲಾಗಿದೆ. ಸಮಾಜವಾದಿ ವ್ಯವಸ್ಥೆ ತನ್ನ ತಪ್ಪುಗಳ ವಿರುದ್ಧ ನಿರ್ದಾಕ್ಷಿಣ್ಯದಿಂದ ಕ್ರಮ ಕೈಗೊಳ್ಳಬಲ್ಲದು. ಆ ಮೂಲಕ ಬೆಂಕಿಯಲ್ಲಿ ಪುಟ್ಟವಿಟ್ಟ ಅಪ್ಪಟ ಚಿನ್ನದಂತೆ ಅದರ ವಿಶ್ವಾಸಾರ್ಹತೆ ಇನ್ನೂ ಹೆಚ್ಚಾಗಿದೆ.

ತಮಿಳುನಾಡು :

3000 ಕಾರ್ಮಿಕರ ಅನ್ನ ಸತ್ಯಾಗ್ರಹ

ಮುಚ್ಚಿರುವ ಗಿರಣಿಗಳನ್ನು ತೆರೆಯಬೇಕೆಂದು ಒತ್ತಾಯಿಸಿಕೊಯಮುತ್ತೂರು ಜಿಲ್ಲೆಯ ಎಲ್ಲಾ ಕಾರ್ಮಿಕ ಸಂಘಗಳಿಗೆ ಸೇರಿದ 3000 ಕಾರ್ಮಿಕರು ಸೆ. 11ರಂದು ಉಪವಾಸ ಸತ್ಯಾಗ್ರಹವನ್ನು ನಡೆಸಿದರು. ತಮಿಳುನಾಡಿನಲ್ಲಿ 18 ಹತ್ತಿ ಗಿರಣಿಗಳನ್ನು ಮುಚ್ಚಲಾಗಿದ್ದು ಇದನ್ನು ಪುನಃ ತೆರೆಯುವಂತೆ ಮಾಡಿ ಸರ್ಕಾರವೇ ವಹಿಸಿಕೊಂಡು ನಡೆಸ ಬೇಕೆಂದು ರಾಜ್ಯದ ಎಲ್ಲಾ ಕಾರ್ಮಿಕ ಸಂಘಗಳೂ ಕಳೆದ ಎರಡು ವರ್ಷಗಳಿಂದ ಹೋರಾಟ ನಡೆಸುತ್ತಿವೆ. ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಎಲ್ಲಾ ಕಾರ್ಮಿಕ ಸಂಘಗಳ ಮುಖಂಡರು ಸಮಸ್ಯೆಯನ್ನು ಬಗೆ ಹರಿಸ ಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿಯೆದುರು ಆಮರಣ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಆಗ ರಾಜ್ಯ ಸರ್ಕಾರ ಮಧ್ಯ ಪ್ರವೇಶ ಮಾಡಿ ಮುಚ್ಚಲ್ಪಟ್ಟಿರುವ ಗಿರಣಿಗಳ ಪೈಕಿ ಶ್ರೀಹರಿಮಿಲ್ಸ್, ಭವಾನಿ ಮಿಲ್ಸ್‌ಗಳನ್ನು ತೆರೆಯುವುದಾಗಿ ಆಶ್ವಾಸನೆ ನೀಡಿತು. ಆದರೆ ಇದುವರೆಗೆ ಸರ್ಕಾರ ಈ ಬಗ್ಗೆ ಸರಿಯಾದ ಕ್ರಮ ಕೈಗೊಂಡಿಲ್ಲವಾದ ಕಾರಣ 15,000 ಕ್ಕೂ ಹೆಚ್ಚಿನ ಕಾರ್ಮಿಕರು ಮತ್ತು ಅವರ ಕುಟುಂಬಗಳು ಹೇಳಲಾಗದ ಸಂಕಷ್ಟದಲ್ಲಿ ಮುಳುಗಿದ್ದಾರೆ. ಅನೇಕರು ಹಸಿವಿನಿಂದ ಸತ್ತಿದ್ದಾರೆ.

ಈ ಪರಿಸ್ಥಿತಿಯಲ್ಲಿ ಹಸಿವಿನಿಂದ ಬಳಲುತ್ತಿರುವ ಕಾರ್ಮಿಕರನ್ನು ರಕ್ಷಿಸಲು ಮುಚ್ಚಿರುವ ಗಿರಣಿಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೇ ವಹಿಸಿಕೊಳ್ಳಬೇಕೆಂದು ಇನ್ನು ಮುಂದೆ ಗಿರಣಿಗಳು ಮುಚ್ಚದಂತೆ ನೋಡಿಕೊಳ್ಳಬೇಕೆಂದು, ದೇಶಾದ್ಯಂತ ಇರುವ ಹತ್ತಿ ಗಿರಣಿಗಳನ್ನು ರಾಷ್ಟ್ರೀಕರಿಸಬೇಕೆಂದೂ ಎಲ್ಲಾ ಕಾರ್ಮಿಕ ಸಂಘಗಳ ಮುಖಂಡರು; ಮತ್ತು ಕಾರ್ಮಿಕರು ನಗರದ ವಿವಿಧ ಸರ್ಕಾರಿ ಕಛೇರಿಗಳೆದುರು ಸಾಮೂಹಿಕ ಉಪವಾಸ ಸತ್ಯಾಗ್ರಹ ನಡೆಸಿದರು. ಕೊಯಮುತ್ತೂರು ಜಿಲ್ಲೆಯ ತಿರುಪ್ಪೂರು, ಉಡುಮಲ್ಪೇಟೆ ಮತ್ತಿತರ ಕಡೆಗಳಲ್ಲೂ ಸತ್ಯಾಗ್ರಹ ನಡೆಯಿತು.

ಸಿ. ಪಿ. ಐ. ನಿಂದ ಹೊರಬಿದ್ದು ಹೊಸ ಪಕ್ಷ

ಭಾರತ ಕಮ್ಯುನಿಸ್ಟ್ ಪಕ್ಷದಿಂದ ಹೊರ ಹಾಕಲ್ಪಟ್ಟ ಎಂ. ಕಲ್ಯಾಣ ಸುಂದರಂ ಮತ್ತು ಅವರ ಬೆಂಬಲಿಗರು 'ತಮಿಳುನಾಡು ಭಾರತ ಕಮ್ಯುನಿಸ್ಟ ಪಕ್ಷ' ಎಂಬ ಹೊಸ ಪಕ್ಷವನ್ನು ಸೆ. 6 ರಂದು ಸ್ಥಾಪಿಸಿದ್ದಾರೆ. ಸೆ. 10ರಂದು ತಿರುಚ್ಚಿಯಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಕಲ್ಯಾಣ ಸುಂದರಂ ಹೊಸ ಪಕ್ಷವು ಡಿ.ಎಂ.ಕೆ, ಎ.ಐ.ಎ.ಡಿ ಎಂ.ಕೆ, ಅಥವಾ ಕಾಂಗ್ರೆಸ್ (ಐ) ನೊಂದಿಗೆ ಸೇರುವುದಿಲ್ಲವೆಂದು ತಿಳಿಸಿದ್ದಾರೆ. ಅಲ್ಲದೆ ತಮ್ಮ ಪಕ್ಷ ಸಿ.ಪಿ.ಐ. (ಎಂ) ನೊಂದಿಗೆ ವಿಲೀನಗೊಳ್ಳುವುದಿಲ್ಲವೆಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ಪಿ. ಮಾಣಿಕ್ಯಂ ನೇತೃತ್ವದ ಸಿ.ಪಿ.ಐ. ಪಕ್ಷವನ್ನು ನೀವು ಉದ್ದೇಶಿಸಿರುವ ಐಕ್ಯ ಕಮ್ಯುನಿಸ್ಟ ಚಳುವಳಿಯೊಡನೆ ಸೇರಿಸಿಕೊಳ್ಳುವಿರಾ ಎಂಬ ಪತ್ರಕರ್ತರೊಬ್ಬರ ಪ್ರಶ್ನೆಗೆ ಉತ್ತರಿಸಿದ ಕಲ್ಯಾಣ ಸುಂದಂ ಅವರು ಸ್ವತಂತ್ರವಾದ ರಾಜಕೀಯ ಮಾರ್ಗವನ್ನು ಅನುಸರಿಸುವುದಾದರೆ ಅವರನ್ನು ಸೇರಿಸಿಕೊಳ್ಳುತ್ತೇವೆ ಎಂದು ಹೇಳಿದರು.

ತಮ್ಮ ಬೆಂಬಲಿಗರಿಗೆದುರಾಗಿ ಮಾಣಿಕ್ಯಂ ಗುಂಪಿನವರು ಹಿಂಸಾಕೃತ್ಯದಲ್ಲಿ ತೊಡಗಿದ್ದಾರೆಂದೂ ಇದಕ್ಕೆ ಶಿವಗಂಗೆಯಲ್ಲಿ ನಡೆದ ಘಟನೆ ನಿದರ್ಶನ ಎಂಬುದಾಗಿ ಕಲ್ಯಾಣ ಸುಂದರಂ ಹೇಳಿದರು.

ತಮ್ಮ ಹೊಸ ಪಕ್ಷದ ಸಭೆ ಗುಡಿಯಾತ್ತಂನಲ್ಲಿ ನಡೆದು 7 ಮಂದಿಯ ಕಾರ್ಯಕಾರಿ ಸಮಿತಿ, 19 ಸದಸ್ಯರ ರಾಜ್ಯ ಸಮಿತಿ ಹಾಗೂ 70 ಸದಸ್ಯರ ರಾಜ್ಯ ಕೌನ್ಸಿಲ್ ಅನ್ನು ಚುನಾಯಿಸಲಾಗಿದೆಯೆಂದು ಅವರು ತಿಳಿಸಿದ್ದಾರೆ.

ಕೋಮು ಸೌಹಾರ್ದತಾ ಸಮಾವೇಶ

ರಾಯಚೂರು ನಗರದ ಪಾತಿಮಾ ಕಾಲೇಜಿನ ಸಭಾಂಗಣದಲ್ಲಿ ಸೆಪ್ಟೆಂಬರ್ 20ರಂದು ಕೋಮುಸೌಹಾರ್ದತಾ ಸಮಾವೇಶ ಜರುಗಿತು. ರೆಕ್ಕೆ ಬಿಚ್ಚಿದ ಪಾರಿವಾಳ ವಿದ್ದ ಬಿಳಿಯ ಬಾವುಟದ ಧ್ವಜಾರೋಹಣ, ಹಿಂದೂ-ಮುಸ್ಲಿಂ ಐಕ್ಯ ಘೋಷಣೆಯೊಂದಿಗೆ ಆರಂಭಗೊಂಡ ಸಮಾವೇಶದಲ್ಲಿ ನೌಕರರು, ವ್ಯಾಪಾರಸ್ಥರು, ರಾಜಕಾರಣಿಗಳು ಯುವಕರು, ಮಹಿಳೆಯರನ್ನೊಳಗೊಂಡು 250 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರತಿನಿಧಿಗಳಲ್ಲಿ ಅರ್ಧದಷ್ಟು ಮುಸ್ಲಿಂಬಾಂಧವರು ಪಾಲ್ಗೊಂಡಿದ್ದರು. ಮೊದಲಿಗೆ ಕಾ॥ಚಂದ್ರಶೇಖರ ಬಾಳೆ ಸ್ವಾಗತಿಸಿದರು. ಕಾಂಗ್ರೆಸ್ ಮಾಜಿ ಶಾಸಕ ಶ್ರೀ ನಜೀರ್ ಅಹ್ಮದ್ ಸಿದ್ದೀಕಿ ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಶಾಸಕ ಮಹಮ್ಮದ್ ಉಮರ್ ಮಾತನಾಡಿ ಕೋಮು ಗಲಭೆಯಿಂದ ಹರಡಬಹುದಾದ ವಿಷವು ಹಾವಿನ ವಿಷಕ್ಕಿಂತಲೂ ಪ್ರಮಾದಕಾರಿಯೆಂದರು. ಜನತಾ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಸಮದ್ ಸಿದ್ದಿಕಿಯವರು. "ಧಾರ್ಮಿಕ ನೆಲೆಗಟ್ಟಿನಲ್ಲಿ ರಾಷ್ಟ್ರೀಯ ಐಕ್ಯತೆ ಸಾಧ್ಯವೇ ?" ಕುರಿತು ಕಾ॥ ಗಂಗಾಧರ ಕುಷ್ಟಗಿಯವರು, 'ಕೋಮುವಾದದ ಚಾರಿತ್ರಿಕ ಹಿನ್ನೆಲೆ' ಕುರಿತು ಕಾ॥ ಹರಿಣಿ ಕಕ್ಕೇರಿಯವರು, "ಕೋಮುವಾದ ಮತ್ತು ರಾಷ್ಟ್ರೀಯ ಐಕ್ಯತೆ" ಕುರಿತು ವಿಚಾರ ಮಂಡಿಸಿ ಮಾತನಾಡಿದರು. ಕಾ. ಪುರುಷೋತ್ತಮ ಕಲಾಲಬಂಡಿಯವರು ಕೋಮು ಸೌಹಾರ್ದತೆ ಸಾಧಿಸಲು ರಾಷ್ಟ್ರೀಯವಾಗಿ ಸರ್ಕಾರ ಹಾಗೂ ಜನತೆ ಅನುಸರಿಸಬೇಕಾಗಿರುವ ಪ್ರಮುಖವಾದ ವಿಚಾರದ ಕುರಿತು ನಿರ್ಣಯಗಳನ್ನು ಮಂಡಿಸಿದರು. ಸುದೀರ್ಘ ಕಾಲ ನಡೆದ ಈ ಸಮಾರಂಭ ರಾಯಚೂರಿನ ಚರಿತ್ರೆಯಲ್ಲೇ ಪ್ರಥಮವೆಂದು ಹೇಳಲಾಗಿದೆ. ಕೊನೆಯಲ್ಲಿ ರಸೂಲ್ ಅಹ್ಮದ್ ಧನ್ಯವಾದ ಅರ್ಪಿಸಿದರು.

ಎಸ್. ಐ. ಭ್ರಷ್ಟಾಚಾರ ತನಿಖೆಗೆ ಒತ್ತಾಯ

ಬಿಜಾಪುರದ ತೋಳಮಟ್ಟಿ ಗ್ರಾಮೀಣ ವಲಯ ಪಿ.ಎಸ್.ಐ. ಮುಗ್ಧ ರೈತರನ್ನು ಒಡೆದು ಬಡಿದು ಸುಲಿಗೆ ಶೋಷಣೆ ಮಾಡುತ್ತಿದ್ದುದರ ವಿರುದ್ಧ ರೈತ ಸಂಘ ಹಲವಾರು ಭಾರಿ ದೂರು ಸಲ್ಲಿಸಿತು. ಪಿ.ಎಸ್.ಐ. ತೋಳ ಮ ಟ್ಟಿ ಯ ನ್ನು ಸಸ್ಪೆಂಡ್ ಮಾಡಿ ವಿಚಾರಣೆ ನಡೆಸಲು ಜುಲೈ 7 ರಂದು ಸತ್ಯಾಗ್ರಹ ನಡೆಸಲಾಯಿತು. ಅರಣ್ಯ ಮಂತ್ರಿ ಜಿ.ಎನ್. ಬಾಗಲಕೋಟ್‌ರವರುಸಹವಿಚಾರಣೆ ನಡೆಸುವುದಾಗಿ ಆಶ್ವಾಸನೆ ನೀಡಿದರು. ಗೃಹ ಮಂತ್ರಿ, ಐ.ಜಿ.ಪಿ, ಬಿಜಾಪುರ ಎಸ್.ಪಿ. ಗಳ ಆದೇಶದಂತೆ ಡಿ.ಎಸ್.ಪಿ. ವಿಚಾರಣೆ ಮಾಡಿದರು. ರೈತರು ತಮಗೆ ಆದ ಅನ್ಯಾಯ ಎಸ್.ಐ. ಲಂಚ ತೆಗೆದುಕೊಂಡ ಬಗ್ಗೆ ಸಾಕ್ಷಿ ಹೇಳಿದರು. ಬೆಳಗಾಂ .ಡಿ.ಐ.ಜಿ. ಕೂಡ ವಿಚಾರಣೆ ನಡೆಸಿದರೂ ಇದುವರೆವಿಗೂ ಯಾವುದೇ ಕ್ರಮ ಜರುಗಿಸದಿರುವುದನ್ನು ಖಂಡಿಸಿ ಸೆಪ್ಟೆಂಬರ್ 7ರಂದು ಸಾವಿರಾರು ರೈತರು ಪ್ರತಿಭಟನಾ ಮೆರವಣಿಗೆ ನಡೆಸಿ ತಹಸೀಲ್ದಾರ್‌ರಿಗೆ ಮನವಿ ಪತ್ರ ಅರ್ಪಿಸಿ ತೋಳಮಟ್ಟಿಯವರನ್ನು ಸಸ್ಪೆಂಡ್ ಮಾಡಿ ಸಿ.ಓ.ಡಿ. ತನಿಖೆ ನಡೆಸಲು ಒತ್ತಾಯಿಸಲಾಯಿತು. ಪೋಲೀಸ್ ಅಧಿಕಾರಿಗಳು ಕ್ರಮ ಜರುಗಿಸದಿದ್ದಲ್ಲಿ ರೈತ ಸಂಘ ತೀವ್ರ ರೀತಿಯ ಚಳುವಳಿ ನಡೆಸುವುದಾಗಿ ಬಿಜಾಪುರ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ. ಭೀಮಸಿ ಕಲಾದಗಿ ಎಚ್ಚರಿಸಿದ್ದಾರೆ.

○

ಸಮುದಾಯ ಸೈಕಲ್ ಜಾಥಾ

ರಾಯಚೂರು ಜಿಲ್ಲೆ ಕುಷ್ಟಗಿ ತಾಲ್ಲೋಕುಸಮುದಾಯ, ಗ್ರಾಮೀಣ ಪ್ರದೇಶದ ಜನರಿಗೆ ಕಲೆ ಬೆಳೆಸುವ ದೃಷ್ಟಿಯಿಂದ ತಾಲ್ಲೋಕಿನ ಬ್ಯಾಲಿಹಾಳ, ಚಿಕ್ಕನಂದಿಹಾಳ, ಹಿರೇನಂದಿಹಾಳ, ಪರಶಾಪೂರ, ಕಲಾಲಬಂಡಿ, ಯಲಬುಣಚಿ ಹಾಗೂ ಬೆನಕನಹಾಳ ಗ್ರಾಮಗಳಿಗೆ ಸೈಕಲ್ ಜಾಥಾ ಹಮ್ಮಿಕೊಂಡಿತ್ತು. ತನ್ನ ದಿನನಿತ್ಯದ ಬದುಕಿನಲ್ಲಿ ಎದುರಿಸುವ ಸಮಸ್ಯೆಗಳಿಗೆ ಹಣೆಬರಹ ಕಾರಣವೆಂದು ನಂಬುವ ಜನತೆಗೆ ನಿಜವಾದ ಅರಿವು ಮೂಡಿಸುವುದು ಜಾಥಾದ ಉದ್ದೇಶವಾಗಿತ್ತು. ಕ್ರಾಂತಿ ಗೀತೆಗಳು, 'ಸಂಘರ್ಷದಬದುಕು' ಹಾಗೂ'ಕೂಲಿಯತಂಗಿ'ಎಂಬ ನಾಟಕಗಳನ್ನು ಪ್ರದರ್ಶಿಸಲಾಯಿತು.

ಸೆಪ್ಟೆಂಬರ್ 21 ರಂದು ಕನ್ನಡ ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಸಮುದಾಯ ಸಂಘಟನೆ ಕುಷ್ಟಗಿ ಘಟಕ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಹಾಯಕ ನಿರ್ದೇಶಕ ಎಚ್.ಎಚ್.ಪಾಟೀಲರು ಅಧ್ಯಕ್ಷತೆ ವಹಿಸಿದ್ದರು. ನಾಟಕ, ಹಾಡು ಜನಪದ ಮೇಳಗಳನ್ನು ಹಳ್ಳಿಗಳಲ್ಲಿ ಗ್ರಾಮೀಣ ಕಲೆ ಬೆಳೆಸಲುಸಮುದಾಯ ಸಂಘಟನೆಗೆ ಎಲ್ಲ ನೆರವುನೀಡುವುದಾಗಿ ಭರವಸೆನೀಡಿದರು. ಶ್ರೀಕಾಂತಜಹಗೀರದಾರ,ತಹಸೀಲ್ದಾರ್‌ರಾದ ಕೈಸಾರ ರಜಾತರವರು ಮುಖ್ಯ ಅತಿಥಿಗಳಾಗಿದ್ದರು. ಸಮುದಾಯ ಅಧ್ಯಕ್ಷರಾದ ಹನುಮಂತಪ್ಪ ಚೌಡಕಿಸಂಘಟನೆಯದ್ಯೇಯ ಉದ್ದೇಶಗಳ ಕುರಿತು ಮಾತನಾಡಿದರು. ಗುಡಿಕೋಟಿ ವಂದನಾರ್ಪಣೆ ಮಾಡಿದರು.

ಡಿ. ವೈ. ಎಫ್. ಐ. ಸಮಾವೇಶ

ಮಂಡ್ಯ ಜಿಲ್ಲೆಮಳವಳ್ಳಿ ತಾಲ್ಲೋಕು ಡಿ.ವೈ.ಎಫ್.ಐ. ಘಟಕದ ಅಧಿವೇಶನ ಸೆಪ್ಟೆಂಬರ್ 20ರಂದು ಶಾಂತಿ ಕಾಲೇಜಿನಲ್ಲಿ ನೆರವೇರಿತು. ಕಾ. ಶಶಿಧರ ಸ್ವಾಗತಿಸಿ, ಕಾ. ಸುಬ್ಬೆಗೌಡ ಧ್ವಜಾರೋಹಣ ಮಾಡಿದರು.
ಇತಿಹಾಸ ಉಪನ್ಯಾಸಕರಾದ ಶ್ರೀ ಆರ್.ಎನ್. ಮರಿಸ್ವಾಮಿ ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿಗಳಾದ ಕಾ. ಎಸ್. ಶಿವರಾಂ ಸಂಘಟನೆ ದ್ಯೆಯೋದ್ದೇಶಗಳನ್ನು ವಿವರಿಸಿ ಜಿಲ್ಲೆಯಲ್ಲಿ ಸಂಘಟನೆ ಬಲಿಷ್ಟವಾಗಿ ಬೆಳೆಸಲು ಕರೆ ನೀಡಿದರು. 15 ಗ್ರಾಮಗಳಿಂದ ಸುಮಾರು 70 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾ. ಪುಟ್ಟಮಾದು ವರದಿ ಮಂಡಿಸಿದರು. ತಾಲ್ಲೋಕು ಸಮಿತಿಗೆ ಕಾ. ಶಿವಲಂಗು (ಅಧ್ಯಕ್ಷ) ನಾಗರಾಜ್, ಪಶುಪತಿ (ಉಪಾಧ್ಯಕ್ಷರು) ಕೃಷ್ಣ (ಕಾರ್ಯದರ್ಶಿ) ಬೋರೆಗೌಡ, ನಂಜೇಗೌಡ (ಸಹ ಕಾರ್ಯದರ್ಶಿಗಳು) ಮ ಹ ದೇ ವ್ ಮೂ ರ್ತಿ (ಖಜಾಂಚಿ) ಕಾ. ಎಸ್. ಸುಬ್ಬೇಗೌಡ ಸಲಹೆಗಾರರನ್ನೊಳಗೊಂಡು 15ಜನರ ತಾಲ್ಲೋಕು ಸಮಿತಿಯನ್ನು ಆಯ್ಕೆ ಮಾಡಲಾಯಿತು.

○

ಹರಿಹರದಲ್ಲಿ ಡಿ. ವೈ. ಎಫ್. ಐ.

ಆಗಸ್ಟ 30 ರಂದು ಹರಿಹರ ತಾಲ್ಲೋಕು ಡಿ ವೈ.ಎಫ್.ಐ.ನ ಘಟಕವನ್ನು ರಾಜ್ಯಕಾರ್ಯದರ್ಶಿ ಕಾ.ಎಸ್.ಶಿವರಾಂ ಉದ್ಘಾಟಿಸಿದರು. ಕಾ.ಜಗನ್ನಾಥ್‌ರಾವ್ ಧ್ವಜಾರೋಹಣ ಮಾಡಿದರು. ಕಾ.ಶಿವರಾಂ ಮಾತನಾಡುತ್ತಾ ವಿಶ್ವಶಾಂತಿ, ರಾಜೀವ್‌ಗಾಂಧಿಯವರ ವಿದ್ಯಾರ್ಥಿ-ಯುವಜನ ವಿರೋಧಿ ಕಂಪ್ಯೂಟರೀಕರಣ, ನೂತನ ಶಿಕ್ಷಣ ನೀತಿ, ನಿರುದ್ಯೋಗ ಸಮಸ್ಯೆಗಳು ಉಲ್ಬಣಗೊಳ್ಳುತ್ತಿರುವುದನ್ನು ವಿವರಿಸಿದರು. ಕಾರ್ಮಿಕ ಮುಖಂಡ ಆರ್. ಬಿ. ಅಂಗಡಿ ಯಾಕೂಬ್, ದಾವಣಗೆರೆ, ಸಮುದಾಯದ ಲೋಕಾಪುರ ಪಠಾಣಶೆಟ್ಟಿ, ಹಾಗೂ ಅಣ್ಣಪ್ಪ ಶಂಭ ಕೋರಿ ಮಾತನಾಡಿದರು. ಕೊನೆಯಲ್ಲಿ ಹರಿಹರಿ ತಾಲ್ಲೋಕು ಸಮಿತಿ ರಚಿಸಲಾಯಿತು. ಕಾ.ಜಗನ್ನಾಥ್(ಅಧ್ಯಕ್ಷ)ಎನ್. ಸುಬ್ರಮಣ್ಯಂ(ಉಪಾಧ್ಯಕ್ಷ) ಎಫ್.ಎ.ಹಿರೇಮಠ(ಕಾರ್ಯದರ್ಶಿ) ವಿನಾಯಕನಾವತಿ(ಸಹಕಾರ್ಯದರ್ಶಿ) ಬಿ.ಎಸ್. ಪ್ರಕಾಶ್(ಖಜಾಂಚಿ) ಯವರನ್ನೊಳಗೊಂಡ 15 ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

●

ಡಿ. ವೈ. ಎಫ್. ಐ. ಶಿಬಿರ

ಮೈಸೂರು ಜಿಲ್ಲಾ ಮಟ್ಟದ ಡಿ.ವೈ.ಎಫ್.ಐ. ಅಧ್ಯಯನ ಶಿಬಿರ ಆಗಸ್ಟ 2ರಂದು ಮೈಸೂರಿನಲ್ಲಿ ನಡೆಯಿತು. 40 ಪ್ರತಿನಿಧಿಗಳು ಭಾಗವಹಿಸಿದ್ದರು. ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಕಾ. ಮೋಹನ್ ಕುಮಾರ್ ಮೊದಲ ಅಧಿವೇಶನದಲ್ಲಿ "ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಯುವ ಜನರ ಪಾತ್ರ" ಮತ್ತು ಸ್ವಾತಂತ್ರ್ಯ ನಂತರದ ಯುವ ಜನರ ಸಮಸ್ಯೆ ಬಗ್ಗೆ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂರವರು ಕಾರ್ಯಕ್ರಮ ಧ್ಯೇಯ ಉದ್ದೇಶಗಳ ಕುರಿತು ಉಪನ್ಯಾಸ ನೀಡಿದರು. ಜಿಲ್ಲಾ ಕಾರ್ಯದರ್ಶಿ ಕಾ. ಜಿ. ಜಯರಾಂ ಸಮಾರೋಪ ಭಾಷಣ ಮಾಡಿದರು. ಮೊದಲಿಗೆ ಕಾ.ಜಾರ್ಜ್ ಸ್ವಾಗತಿಸಿ ಚಂದ್ರಶೇಖರ್ ವಂದನಾರ್ಪಣೆ ಮಾಡಿದರು.

○

ಹುಬ್ಬಳ್ಳಿಯಲ್ಲಿ ಎಸ್. ಎಫ್. ಐ. ಹೋರಾಟ

ಹುಬ್ಬಳ್ಳಿಯ ಸಿದ್ಧರೂಢ ಹೈಸ್ಕೂಲ್ ಮೈದಾನದಲ್ಲಿ ಮಹಾ ನಗರ ಪಾಲಿಕೆ ನೀರಿನ -ಟ್ಯಾಂಕ್ ಕಟ್ಟಕೂಡದೆಂದು ಒತ್ತಾಯಿಸಿ ಸರ್ಕಾರಿ ಕಛೇರಿ ಮುಂದೆ ಸುಮಾರು 100 ಮಂದಿ ಮಹಿಳೆಯರೂ ಸೇರಿದಂತೆ 800ವಿದ್ಯಾರ್ಥಿಗಳು ಪ್ರತಿಭಟನಾ ಮತ ಪ್ರದರ್ಶನ ನಡೆಸಿ ಒತ್ತಾಯಿಸಿದ ನಂತರ ತಡೆಯಾಜ್ಞೆ ಜಾರಿಯಾಗಿದೆ, ಸಾಮ್ರಾಜ್ಯಶಾಹಿ ಬ್ರಿಟಿಷ್‌ರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಕಿತ್ತೂರು ಚನ್ನಮ್ಮನ ಕಂಚಿನ ಪುತ್ಥಳಿಯನ್ನು ಹು-ಧಾ- ನಗರ ಪಾಲಿಕೆ ಲಕ್ಷಾಂತರ ರೂ. ಹಣ ಖರ್ಚು ಮಾಡಿ ಸ್ಥಾಪಿಸುವ ನಿರ್ಧಾರವನ್ನು ಎಸ್.ಎಫ್.ಐ. ಸ್ವಾಗತಿಸಿದೆ. ಆದರೆ ಹುಬ್ಬಳ್ಳಿಯ ಯಾವುದೋ ಮೂಲೆಯಲ್ಲಿ ಅದನ್ನು ಸ್ಥಾಪಿಸದೇ ನಗರ ಮಧ್ಯದಲ್ಲಿರುವ ಟ್ರಾಫಿಕ್ ಐಲ್ಯಾಂಡ್‌ದಲ್ಲಿ ನಿರ್ಮಿಸಲು ಒತ್ತಾಯಿಸಿದೆ. 'ಕರ್ನಾಟಕ ತಮಿಳು ಸಂಘಂ' ತಮಿಳು ಪ್ರಾಥಮಿಕ ಶಾಲೆ ಮಾನ್ಯತೆಗಾಗಿ ನಡೆಸಿದ ಹೋರಾಟದಲ್ಲಿ ಎಸ್.ಎಫ್.ಐ. ಸಕ್ರೀಯವಾಗಿ ಭಾಗವಹಿಸಿ ಬೆಂಬಲಿಸಿದೆ.

ಪದವು ವಲಯ ಸಮ್ಮೇಳನ

ಮಂಗಳೂರಿನ ಕುಪ್ಪೆ ಪದವು ವಲಯ ಸಮ್ಮೇಳನ ಸೆಪ್ಟೆಂಬರ್ 4 ರಂದು ಜರುಗಿತು. ವಾಸುದೇವಆಚಾರಿಯವರು ಉದ್ಘಾಟಿಸಿದರು.ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ವಾರ್ಷಿಕ ವರದಿ ಲೆಕ್ಕಪತ್ರವನ್ನು ಸಭೆ ಅಂಗೀಕರಿಸಿತು. ಪ್ರಸಕ್ತ ಸಾಲಿನ ಸಮಿತಿಗೆ ಕಾ॥ ಬಾಲಕೃಷ್ಣಶೆಟ್ಟಿ(ಅಧ್ಯಕ್ಷ) ಉದಯ ಕುಮಾರ್, ಸುಂದರನ್ಯಾಕ್(ಉಪಾಧ್ಯಕ್ಷರು) ವಸಂತಆಚಾರಿ (ಕಾರ್ಯದರ್ಶಿ) ಸದಾಶಿವದಾಸ್, ಬಾಸ್ಕರಆಚಾರಿ (ಜೊತೆಕಾರ್ಯದರ್ಶಿಗಳು) ವಾಸುದೇವಆಚಾರಿ (ಖಜಾಂಚಿ) ಯವರನ್ನೊಳಗೊಂಡು 13 ಜನರ ಕಮಿಟಿ ಚುನಾಯಿತವಾಯಿತು. ಸಮ್ಮೇಳನವು ಸ್ಥಳೀಯ ಹತ್ತು ಬೇಡಿಕೆಗಳ ಬಗ್ಗೆ ಠರಾವು ಅಂಗೀಕರಿಸಿತು. ಮುಖ್ಯ ಅತಿಥಿಗಳಾಗಿ ಕಾ॥ಶಿವಾನಂದಕೋಡಿ ಮಾತನಾಡಿದರು.

○

ರಾಜ್ಯದ್ಯಾಂತ ರೈತರ ಪಿಕೆಟಿಂಗ್

[3ನೇ ಪುಟದಿಂದ]

ಚಿಕ್ಕಮಗಳೂರು

ಚಿಕ್ಕಮಗಳೂರಿನ ಕಳಸದಲ್ಲಿ ಸೆಪ್ಟೆಂಬರ್ 11 ರಂದು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ರೈತರು ಕಳಸದ ನಾಡ ಕಛೇರಿಯನ್ನು ಪಿಕೆಟಿಂಗ್ ನಡೆಸಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ಸೇರಿದಂತೆ 250 ರೈತರು ಬಂಧನವಾದರು. ರೈತ ಸಂಘದ ಜಿಲ್ಲಾ ಸಂಚಾಲಕ ಕಾ.ಕೆ.ಸುಕುಮಾರ್, ಸಂಘಟಕ ಕಾ.ಅಣ್ಣಿಯವರು ನೇತೃತ್ವ ವಹಿಸಿದ್ದರು.

ಮೈಸೂರು

ಜಿಲ್ಲೆಯ ಹುಣಸೂರಿನಲ್ಲಿ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸೆಪ್ಟೆಂಬರ್ 9 ಮತ್ತು 10 ರಂದು ಹುಣಸೂರು ಬಸ್ ನಿಲ್ದಾಣದ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಯಿತು. 11 ರಂದು ತಾಲ್ಲೋಕು ಕಛೇರಿಯನ್ನು ಪಿಕೆಟಿಂಗ್ ನಡೆಸಿ ರೈತ ಸಂಘದ ಕಾರ್ಯಕರ್ತರುಬಂಧನಕ್ಕೊಳಗಾದರು.

ಮಂಡ್ಯಜಿಲ್ಲೆ

ಅಖಿಲ ಭಾರತ ಕಿಸಾನ್ ಸಭಾ ಕರೆಯಂತೆ ಸೆ.9 ರಂದು ಜಿಲ್ಲೆಯ ಮಳವಳ್ಳಿಯಲ್ಲಿ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಯ 100 ಜನ ಕಾರ್ಯಕರ್ತರು ಪ್ರಮುಖ ಬೀದಿಗಳಲ್ಲಿ ರೈತರ ಬೇಡಿಕೆಗಳ ಈಡೇರಿಸಲು ಒತ್ತಾಯಿಸಿ ಮೆರವಣಿಗೆ ನಡೆಸಿದರು. ತಹಸೀಲ್ದಾರ್‌ಕಛೇರಿ ಮುಂದೆ ಧರಣಿ ನಡೆಸಿ ಪಿಕೆಟಿಂಗ್ ಮಾಡಿ 48 ಜನರು ಬಂಧನಕ್ಕೊಳಗಾದರು. ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾ.ಎಂ ಎನ್.ಉಗ್ರಪ್ಪನವರು ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು.

ಕೊಡಗು

ಜಿಲ್ಲೆಯ ವಿರಾಜಪೇಟೆಯಲ್ಲಿ ರೈತರ ಬೇಡಿಕೆಗಳಿಗೆ ಒತ್ತಾಯಿಸಿ ರೈತ ಸಂಘ ಮತ್ತು ಡಿ.ವೈ.ಎಫ್.ಐ.ನ ಕಾರ್ಯಕರ್ತರು ಪಿಕೆಟಿಂಗ್ ನಡೆಸಿ 86ಮಂದಿ ಬಂಧನಕ್ಕೊಳಗಾದರು. ಕಾ.ಇಬ್ರಾಹಿಂ ಸ್ಯಾನ್‌ಲಿ ಮತ್ತು ಕಾ.ಪ್ರಮೋದ್ ನಾಯಕತ್ವ ವಹಿಸಿದ್ದರು.

ಪರಮಾಣು ಕ್ಷಿಪಣಿ ನಾಶ ಮಹತ್ವದ ಒಪ್ಪಂದ

ಜಗತ್ತನ್ನು ಈ ಶತಮಾನದ ಅಂತ್ಯದೊಳಗೆ ಅಸ್ತ್ರಗಳಿಂದ ಮುಕ್ತಗೊಳಿಸುವ ತನ್ನ ಸತತ ಪ್ರಯತ್ನಗಳ ಇನ್ನೊಂದು ಹೆಜ್ಜೆಯಾಗಿ ಸೋವಿಯೆತ್ ಒಕ್ಕೂಟ ಕಳೆದ ತಿಂಗಳು ಕಡಿಮೆ ಮತ್ತು ಮಧ್ಯಮ ಅಂತರದ, ಅಂದರೆ 500 ಕಿ.ಮೀ.ನಿಂದ 5000 ಕಿ.ಮೀ. ವರೆಗೆ ಹೋಗಬಲ್ಲ ಎಲ್ಲಾ ಪರಮಾಣು ಕ್ಷಿಪಣಿಗಳನ್ನು ನಿಷೇಧಿಸುವ ಪ್ರಸ್ತಾಪವನ್ನು ಮುಂದಿಟ್ಟಿತು. ಈಗಾಗಲೇ ಇರುವ ಇಂತಹ ಸುಮಾರು 1000 ಕ್ಷಿಪಣಿಗಳನ್ನು ನಾಶಗೊಳಿಸುವ ಅಂಶವೂ ಅದರಲ್ಲಿ ಸೇರಿತ್ತು. ಈ ಇದರಿಂದ ಸೋವಿಯೆತ್ ಒಕ್ಕೂಟವೇ ಹೆಚ್ಚು ಕ್ಷಿಪಣಿಗಳನ್ನು ನಾಶ ಪಡಿಸಬೇಕಾಗಿ ಬರುತ್ತದೆ. ಯಾಕೆಂದರೆ ಅಮೇರಿಕಾದ ಇನ್ನೂ ಭಯಾನಕ ಅಸ್ತ್ರಗಳಿಂದ ರಕ್ಷಣೆಗಾಗಿ ಈ ವರ್ಗದ ಕ್ಷಿಪಣಿಗಳನ್ನು ಅದು ಹೆಚ್ಚಾಗಿಯೇ ಹೊಂದಬೇಕಾಗಿ ಬಂದಿತ್ತು. ಆದರೂ ಮೂರ್ಖ ಸಾಮ್ರಾಜ್ಯಶಾಹಿಗಳಿಂದ ವಿಶ್ವವಿನಾಶ ತಪ್ಪಿಸಲು ಈ ತ್ಯಾಗಕ್ಕೆ ಅದು ಸಿದ್ಧವಾಗಿತ್ತು.

ಹೀಗಿದ್ದರೂ ಅಮೆರಿಕಾದ ರೇಗನ್ ಆಡಳಿತ ಈ ನಿಷೇಧದಿಂದ ತಪ್ಪಿಸಿಕೊಳ್ಳಲು ಸರ್ವಪ್ರಯತ್ನ ನಡೆಸಿತು. ಮುಖ್ಯವಾಗಿ ಪಶ್ಚಿಮ ಜರ್ಮನಿಯಲ್ಲಿರುವ ಪರ್ಷಿಂಗ್-1ಎ ಕ್ಷಿಪಣಿಗಳು ಈ ನಿಷೇಧಕ್ಕೆ ಒಳಪಡಬಾರದೆಂದು ಅದು ವಾದಿಸಿತು. ಕಾರಣ ಅದು ತನ್ನದಲ್ಲ ಪಶ್ಚಿಮ ಜರ್ಮನಿಯದು ಎಂದು. ಆದರೆ ಸೋವಿಯೆತ್ ವಿದೇಶಾಂಗ ಮಂತ್ರಿ ಹಾಗೂ ಸಿ.ಪಿ.ಎಸ್.ಯು. ಪಾಲಿಟ್ ಬ್ಯೂರೋ ಸದಸ್ಯರಾದ ಶೆವರ್‌ನಾಡ್ಜೆಯವರ ತೀಕ್ಷ್ಣ ಪ್ರಶ್ನೆಯನ್ನು ಅದು ಉತ್ತರಿಸಲಾರದೇ ಕೊನೆಗೂ ಪಶ್ಚಿಮ ಜರ್ಮನಿಯಲ್ಲಿನ 72ಪರ್ಷಿಂಗ್ ಕ್ಷಿಪಣಿಗಳೂ ಸೇರಿದಂತೆ ಎಲ್ಲಾ ಮಧ್ಯಮಾಂತರದ ಪರಮಾಣು ಕ್ಷಿಪಣಿಗಳ ನಿಷೇಧ ಹಾಗೂ ನಾಶದ ಬಗ್ಗೆ ಎರಡೂ ದೇಶದ ವಿದೇಶಾಂಗ ಮಂತ್ರಿಗಳು ಒಂದು ಒಮ್ಮತಕ್ಕೆ ಬರಲು ಈಗಸಾಧ್ಯವಾಗಿದೆ. ರೇಗನ್ ಹಾಗೂ ಗೋರ್ಬಚೇವ್ ಡಿಸೆಂಬರ್‌ನಲ್ಲಿ ನಡೆಯುವ ಶೃಂಗ ಸಭೆಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕುವುದು ಎಂದು ತಿಳಿದು ಬಂದಿದೆ.

ಈ ಮೊದಲು ಅಗಸ್ಟ್ 6 ರಂದು ಜಿನೇವಾದಲ್ಲಿ ನಡೆದ ನಿಶ್ಶಸ್ತ್ರೀಕರಣ ಕುರಿತಾದ ಸಭೆಯಲ್ಲಿ ಶೆವರ್‌ನಾಡ್ಜೆಯವರು "ನಿಮ್ಮ ಶಸ್ತ್ರಾಗಾರದಲ್ಲಿ ಪರಮಾಣು ಅಸ್ತ್ರಗಳಿವೆಯೇ?" ಎಂದು ನೇರವಾಗಿ ಪಶ್ಚಿಮಜರ್ಮನಿಯ ಪ್ರತಿನಿಧಿಯನ್ನು ಕೇಳಿದರೆ, "ಪರ್ಷಿಂಗ್ ಕ್ಷಿಪಣಿಗಳ ನಿಜವಾದ ಹತೋಟಿ ಯಾರ ಕೈಯಲ್ಲಿದೆ?" ಎಂದು ಅಮೆರಿಕನ್ ಪ್ರತಿನಿಧಿಯನ್ನು ಪ್ರಶ್ನಿಸಿದ್ದರು. ಅಂತರಾಷ್ಟ್ರೀಯ ಸರಧಿಯ ಪ್ರಕಾರಪಶ್ಚಿಮಜರ್ಮನಿ ಪರಮಾಣು ಶಸ್ತ್ರ ಹೊಂದುವುದು ಕಾನೂನು ಬಾಹಿರವಾದ್ದರಿಂದ ಶೆವರ್‌ನಾಡ್ಜೆ ಈ ಪ್ರಶ್ನೆ ಕೇಳಿದರು ಸಹಜವಾಗಿಯೇ ಇಬ್ಬರೂ ಪ್ರತಿನಿಧಿಗಳು ನಿರುತ್ತರರಾಗ ಬೇಕಾಯಿತು. ಪಶ್ಚಿಮ ಜರ್ಮನಿಯ ಶಾಂತಿ ಪರ ಶಕ್ತಿಗಳ ಒತ್ತಡದಿಂದಾಗಿ ಅಲ್ಲಿನಸರಕಾರ ಪರ್ಷಿಂಗ್ ಕ್ಷಿಪಣಿಗಳನ್ನು ನಾಶಪಡಿಸಲುಒಪ್ಪಬೇಕಾಯಿತು.

ನಿರೀಕ್ಷಿಸಿದಂತೆ ಡಿಸೆಂಬರ್‌ನಲ್ಲಿ ಈ ಒಪ್ಪಂದ ನಡೆದರೆ ಇತಿಹಾಸದಲ್ಲಿಮೊತ್ತಮೊದಲ ಬಾರಿಗೆ ಎರಡು ವರ್ಗಗಳ ಪರಮಾಣು ಶಸ್ತ್ರಗಳು ನಾಶಗೊಳ್ಳುತ್ತವೆ. ಆದ್ದರಿಂದಲೇ ಈಗಿನ ಒಮ್ಮತ "ಸಮಸ್ತ ಮಾನವ ಕುಲದ, ನಾಗರಿಕತೆಯ ಯಶಸ್ಸು" ಎಂದು ಶೆವರ್‌ನಾಡ್ಜೆ ಉದ್ಗರಿಸುವುದು. 1985ರ ನೋಬೆಲ್ ಶಾಂತಿ ಪ್ರಶಸ್ತಿ ಪಡೆದ ಪರಮಾಣು ಯುದ್ಧ ವಿರೋಧಿ ಅಂತರರಾಷ್ಟ್ರೀಯ ವೈದ್ಯರುಗಳ ಸಂಸ್ಥೆ ಈ ಒಮ್ಮತವನ್ನು ಸ್ವಾಗತಿಸಿದೆ. ಈಗಲಾದರೂ ಪರಮಾಣು ಪರೀಕ್ಷಣೆಗಳನ್ನು ನಿಲ್ಲಿಸಬೇಕೆಂದು ಬ್ರಿಟನ್ನಿನ ಲೇಬರ್ ಪಕ್ಷ ಥ್ಯಾಚರ್ ಸರ್ಕಾರವನ್ನು ಒತ್ತಾಯಿಸಿದೆ. ಆದರೆ ಅತ್ಲಾಂಟಿಕ್ ಒಕ್ಕೂಟದ ಅಧಿಕಾರಿಗಳು ಇದರಿಂದ ಕುಪಿತರಾದಂತಿದೆ. ಅದೂ ಸಹಜವೇ.

ಪರ್ಷಿಯ ಕೊಲ್ಲಿಯಲ್ಲಿ ಅಮೇರಿಕಾ

ಸೆಪ್ಟೆಂಬರ್ 22ರಂದು ಇರಾನೀ ಹಡಗೊಂದರ ಮೇಲೆ ಅಮೇರಿಕನ್ ನಾವಿಕ ಪಡೆಯ ಹೆಲಿಕಾಪ್ಟರ್‌ಗಳ ಹಲ್ಲೆಯಿಂದಾಗಿಪರಿಸ್ಥಿತಿಗೆಇನ್ನಷ್ಟು ಬಿಗಡಾಯಿಸಿದೆ. ಪರ್ಷಿಯಾ ಕೊಲ್ಲಿಯಲ್ಲಿನ ಈಗಿನ ಸ್ಫೋಟಕ ಪರಿಸ್ಥಿತಿ ಏಳು ವರ್ಷಗಳ ಇರಾನ್-ಇರಾಕ್ ನಡುವಿನ ಬುದ್ಧಿಗೇಡಿ ಯುದ್ಧದಿಂದಾಗಿ ಉಂಟಾಗಿದ್ದರೂ ಈಗ ಅಂತರಾಷ್ಟ್ರೀಯ ಹಡಗುಸಾಗಾಣಿಕೆಯ ಸ್ವಾತಂತ್ರ್ಯ ರಕ್ಷಣೆಯ ಹೆಸರಿನಲ್ಲಿ ಅಮೇರಿಕಾ ಮತ್ತು ಇತರ ಪಾಶ್ಚಿಮಾತ್ಯ ರಾಷ್ಟ್ರಗಳ ನಾವಿಕ ಪಡೆಗಳು ಈ ಕೊಲ್ಲಿಯಲ್ಲಿ ತುಂಬಿ ಹೋಗಿವೆ. ಇದರಿಂದಾಗಿಯೂ ನಾಗರೀಕ ಹಡಗು ಸಾಗಾಣಿಕೆಗೆ ಬಹಳಷ್ಟು ತಡೆಯುಂಟಾಗಿದ್ದು ತೈಲ ಸಾಗಾಣಿಕೆಗೆ ತೊಂದರೆಯಾಗುತ್ತಿದೆಯಂತೆ. ಜುಲೈ ತಿಂಗಳಲ್ಲಿ ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಇರಾನ್ ಹಾಗೂ ಇರಾಕ್ ತಮ್ಮ ಕಾದಾಟ ನಿಲ್ಲಿಸಬೇಕೆಂದು ಹಾಗೂ ಇತರ ರಾಷ್ಟ್ರಗಳು ಗರಿಷ್ಟ ತಾಳ್ಮೆಯಿಂದ ವರ್ತಿಸಬೇಕೆಂದು ನಿರ್ಣಯ ಕೈಗೊಂಡಿತು. ಇರಾಕ್ ಇದನ್ನು ಸ್ವಾಗತಿಸಿದರೆ, ಇರಾನ್ ಕೂಡಾ ಹಿಂದಿನಂತೆ ಇದನ್ನು ತಿರಸ್ಕರಿಸಲಿಲ್ಲ. ಆದರೆ ಈ ನಿರ್ಣಯವನ್ನು ಮೊತ್ತಮೊದಲ ಬಾರಿಗೆ ಉಲ್ಲಂಘಿಸಿದ್ದು ಅದಕ್ಕೆ ಮತನೀಡಿದ್ದ ಅಮೇರಿಕಾವೇ. ಗರಿಷ್ಠ ತಾಳ್ಮೆ ತೋರುವ ಬದಲು ಅದು ಗರಿಷ್ಠ ಮಿಲಿಟರಿ ಮನೋಭಾವ ತೋರಲಾರಂಭಿಸಿತು.

ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಹಿಂದೆ ವಿಯೆಟ್ನಾಂನಲ್ಲಿ, ಇತ್ತೀಚೆಗಷ್ಟೇ ನಿಕಾರಾಗುವಾದ ಸಮುದ್ರ ತಳದಲ್ಲಿ ಸಿಡಿಮದ್ದುಗಳನ್ನಿಟ್ಟ ಅಮೇರಿಕಾದೇಶ ಈಗ ಇರಾನ್ ಕೊಲ್ಲಿಯಲ್ಲಿ ಸಿಡಿಮದ್ದು ಇಟ್ಟಿರುವುದು ಅಂತರಾಷ್ಟ್ರೀಯ ಸಾಗಾಣಿಕೆಯ ಸ್ವಾತಂತ್ರ್ಯಕ್ಕೆ ಅಡ್ಡಿಯುಂಟು ಮಾಡಿದೆಯೆಂದು ಬೊಬ್ಬೆ ಹಾಕುತ್ತಿದೆ.

ಅಮೇರಿಕಾದ 'ಕ್ರಿಶ್ಚಿಯನ್ ಸಾಯನ್ಸ್ ಮಾನಿಟರ್' ಪತ್ರಿಕೆಯ ಜೋಸೆಫ್ ಹರ್ಷ್ ಪ್ರಕಾರ ರೇಗನ್‌ರ ಈ ದುಸ್ಸಾಹಸ ವಿಕ್ಟೋರಿಯಾ ಮಹಾರಾಣಿಯ ಕಾಲದ ವಸಾಹತುಶಾಹೀ ಯುದ್ಧಗಳಂತೇ ಇದೆ. ಲೆಬನಾನ್‌ನಲ್ಲಿ ಅಮೇರಿಕನ್ ಪ್ರಯತ್ನ, ಗ್ರೆನಡಾದ ಅತಿಕ್ರಮಣ, ಮತ್ತು ಲಿಬ್ಯಾದ ಮೇಲೆ ಬಾಂಬ್ ನಂತರ ಪರ್ಷಿಯಾ ಕೊಲ್ಲಿಯಲ್ಲಿ ಇದೀಗ ರೇಗನ್ ನಾಲ್ಕನೇ ವಸಾಹತುಶಾಹೀ ಯುದ್ಧದಲ್ಲಿ ತೊಡಗಿದ್ದಾರೆಂದು ಅವರು ಟೀಕಿಸಿದ್ದಾರೆ.

ಇಂಗ್ಲೆಂಡ್‌ನಲ್ಲಿ ಜನಾಂಗೀಯ ಪರಿಸ್ಥಿತಿ

ಬಿಗಡಾಯಿಸಿದೆ ಎಂದು ಕಳೆದವಾರ ಪ್ರಕಟಗೊಂಡ ಒಂದು ಸರ್ಕಾರಿ ಆಯೋಗದ ವರದಿ ತಿಳಿಸಿದೆ. ಈಗ ಏಶ್ಯನ್‌ರಿಗೆ ಮತ್ತು ಕರಿಯರಿಗೆ ಸುಭದ್ರವೆನ್ನಿಸುವ ಒಂದು ಸ್ಥಳವೂ ಬ್ರಿಟನ್ನಿನಲ್ಲಿ ಉಳಿದಿಲ್ಲ ಎಂದು ಅದು ಖೇದ ವ್ಯಕ್ತಪಡಿಸಿದೆ. ಜನಾಂಗೀಯ ಹಲ್ಲೆಗಳು ಬ್ರಿಟನ್ನಿನಲ್ಲಿ ಹೊಸದೇನಲ್ಲ ಆದರೂ, ಈಗ ಅದರ ಪ್ರಮಾಣ ಹಿಂದೆಂದೂ ಕಂಡಿರದಷ್ಟು ಅಗಾಧವಾಗಿ ಹೆಚ್ಚಿದೆ ಎಂದು ಅದು ತಿಳಿಸಿದೆ.

ಪ್ರಜಾಪ್ರಭುತ್ವ ಹುಟ್ಟಿದ ನಾಡಿನಲ್ಲಿ ವಾಕ್ ಸ್ವಾತಂತ್ರ್ಯ

ಬ್ರಿಟನ್ನಿನ ಕಸ್ಟಮ್ಸ್ ಅಧಿಕಾರಿಗಳು ಅತ್ಯಂತ ಚುರುಕಿನಿಂದ ಅಮೇರಿಕಾದಿಂದ ಬರುವ ಎಲ್ಲಾ ಪ್ರಯಾಣಿಕರ ಸಾಮಾನುಗಳನ್ನು ಎರಡೆರಡು ಬಾರಿ ಆಮೂಲಾಗ್ರವಾಗಿ ಶೋಧಿಸುತ್ತಿದ್ದಾರಂತೆ. ಇದು ಯಾವುದೋ ಒಂದು ಆಂಗ್ಲೋ ಅಮೆರಿಕನ್ ಕಳ್ಳ ಸಾಗಾಣಿಕೆದಾರರ ತಂಡವನ್ನು ಹಿಡಿದು ಹಾಕಲೇನೂ ಅಲ್ಲ. ಬ್ರಿಟನ್ನಿನ ಗುಪ್ತಚಾರ ಪಡೆ ಎಮ್.ಐ 5.ಎಂಬ ಸಂಸ್ಥೆಯಲ್ಲಿದ್ದು ನಿವೃತ್ತಿಯನಂತರ ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಪೀಟರ್ ರೈಟ್ ಎಂಬಾತನ "ಸ್ಪೈಕ್ಯಾಚರ್" ಎಂಬ ಪುಸ್ತಕದ ಸೀಮಿತ ಆವೃತ್ತಿ ಅಮೆರಿಕಾದಲ್ಲಿ ಪ್ರಕಟವಾಗಿದೆ. ಆದರೆ ಒಂದೂ ಪ್ರತಿ ಬ್ರಿಟನ್ನನ್ನು ಪ್ರವೇಶಿಸಲು ಬಿಡಬಾರದು ಎಂದು ಥ್ಯಾಚರ್ ಸರ್ಕಾರದ ಆಜ್ಞೆಯಾಗಿದೆ. ಅದಕ್ಕೇ ಈಪರದಾಟ ಥ್ಯಾಚರ್ ಸರ್ಕಾರ ಇಷ್ಟೊಂದು ಆತಂಕಗೊಳ್ಳಲು ಕಾರಣವಿಲ್ಲದಿಲ್ಲ. ಪೀಟರ್ ರೈಟ್ ಎಮ್.ಐ.5 ಹಾಗೂ ಎಮ್.ಐ 6ರ ಹಲವಾರು ಕುಕೃತ್ಯಗಳನ್ನು ಈ ಪುಸ್ತಕದಲ್ಲಿ ಬಯಲಿಗೆಳೆದಿದ್ದಾರಂತೆ. ಹೆರಾಲ್ಡ್ ವಿಲ್ಸನ್ ಪ್ರಧಾನಿಯಾಗಿದ್ದಾಗ ಅವರನ್ನು ಈ ಸಂಸ್ಥೆಗಳು ಬಿಟ್ಟಿರಲಿಲ್ಲ. ಅವರ ಪದಚ್ಯುತಿಗೆ ಪ್ರಯತ್ನಿಸುತ್ತಿದ್ದವು ಎಂದು ರೈಟ್ ಬರೆದಿದ್ದಾರೆ. ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷ, ಬ್ರಿಟನ್ನಿನ ಕಾರ್ಮಿಕ ಸಂಘಟನೆಗಳು ಹಾಗೂ ಬ್ರಿಟನ್ನಿನ ಶಾಂತಿಆಂದೋಲನಗಳುಈ ಗುಪ್ತಚಾರ ಸಂಸ್ಥೆಯ ಪ್ರಮುಖಬೇಟೆಗಳು ಲೇಬರ್ ಪಕ್ಷದ ಎಂ.ಪಿ.ಗಳು ಈ ಪಟ್ಟಿಯಲ್ಲಿದ್ದಾರೆ. ಈ ಗುಪ್ತ ದರೋಡೆಗಾರರ ಕಿರುಕುಳಗಳಿಂದ ಮುಕ್ತರಾಗಿರುವ ಏಕೈಕವಿಭಾಗವೆಂದರೆ ಬ್ರಿಟನ್ನಿನ ಸಂಪ್ರದಾಯಶರಣ ಟೋರಿಗಳು.

ವಾಕ್ ಸ್ವಾತಂತ್ರ್ಯ ಹಕ್ಕನ್ನುಬದಿಗೆ ತಳ್ಳಿ ಬ್ರಿಟನ್ನಿನಸರಕಾರ ಸ್ಪೈಕ್ಯಾಚರ್ ಪುಸ್ತಕವನ್ನು ನಿಷೇಧಿಸುವತಡೆಯಾಜ್ಞೆಯನ್ನು ನ್ಯಾಯಾಲಯದಿಂದ ಈಗಾಗಲೇ ಪಡೆದಿದೆ.

ಪ. ಬಂಗಾಳ ನೆರೆ ಪರಿಹಾರ ನಿಧಿ

ಸಿ.ಪಿ.ಐ.(ಎಂ)ನ ಪ.ಬಂಗಾಳ ರಾಜ್ಯ ಸಮಿತಿ ಸಭೆಯು ರಾಜ್ಯದ ಪ್ರವಾಹ ಪರಿಸ್ಥಿತಿಯನ್ನು ಪರಿಶೀಲಿಸಿ ನೆರೆ ಸಂತ್ರಸ್ತರ ನೆರವಿಗಾಗಿ ನಿಧಿಸಂಗ್ರಹವನ್ನು ಆರಂಭಿಸಬೇಕೆಂದು ಜಿಲ್ಲಾ ಸಮಿತಿಗಳಿಗೆಮನವಿ ಮಾಡಿದೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಜನರನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾಗಿದ್ದ ಅನೇಕ ಪಾರ್ಟಿ ಕಾರ್ಯಕರ್ತರು ಪ್ರಾಣತೆತ್ತಿದ್ದು ಇವರ ನಿಸ್ವಾರ್ಥ ತ್ಯಾಗದ ಸ್ಮರಣೆಗಾಗಿ ರಾಜ್ಯಸಮಿತಿ ಸಭೆ ಒಂದು ನಿಮಿಷ ಮೌನ ಆಚರಿಸಿತು. ರಾಜ್ಯ ಸಮಿತಿ ಕರೆಗೆ ತಕ್ಷಣದ ಪ್ರತಿಕ್ರಿಯೆ ಎಂಬಂತೆ ಜಿಲ್ಲಾ ಸಮಿತಿ ಮುಖಂಡರು ಸಾಮೂಹಿಕ ಸಂಘಟನೆಗಳ ಮುಖಂಡರು ತಾವು ಈಗಾಗಲೇಸಂಗ್ರಹಿಸಿರುವ ನಿಧಿಯ ಮೊತ್ತವನ್ನು ಪ್ರಕಟಿಸಿದರು. ಉತ್ತರ ಪರಗಣ ಜಿಲ್ಲೆಯಿಂದ 20,000 ರೂ ನಿಧಿಗೆ ನೀಡುವುದಾಗಿ ಕಾ. ನಿರೇನ್‌ಘೋಷಪ್ರಕಟಿಸಿದರುಕಲ್ಕತ್ತಾ ಜಿಲ್ಲಾ ಸಮಿತಿಯಿಂದ ಕಾ.ಲಕ್ಷ್ಮಿಸೇನ್ 20,000 ರೂ ದಕ್ಷಿಣ ಪರಗಣ ಜಿಲ್ಲಾ ಸಮಿತಿಯಿಂದ 5000 ರೂ. ಗಳನ್ನು ಕಾ.ಕುದಿರಾಂಭಟ್ಟಾಚಾರ್ಯ ನೀಡಿದರು. ಡಿ.ವೈ.ಎಫ್.ಐ.ನ ಕಾ.ರಬಿನ್‌ದೇಬ್ ಜೆ.ಎಂ.ಎಸ್.ನ ಕಾ.ಶ್ಯಾಮಲಗುಪ್ತ, ಸಿ.ಐ.ಟಿ.ಯು.ನ ಕಾ.ಮನೋರಂಜನ್ ರಾಯ್ ಅವರುಗಳು ತಲಾ 10,000 ರೂ.ಗಳನ್ನು ನೀಡಿದರು. ಮಿಡ್ನಾಪುರ ಜಿಲ್ಲಾ ಸಮಿತಿಯಿಂದ 10,000 ರೂ. ಹೀಗೆ ಒಟ್ಟು ಮೊದಲ ಸುತ್ತಿನಲ್ಲೇ ಸಿ.ಪಿ.ಐ.(ಎಂ) 87,63[illegible] ರೂಗಳನ್ನು ಸಂಗ್ರಹಿಸಿ ಪ್ರಾರಂಭಿಕ ಹೆಜ್ಜೆಯನ್ನು ಪರಿಣಾಮಕಾರಿಯಾಗಿ ಇರಿಸಿದೆ.

ಕಾಂಗ್ರೆಸ್ ಬಂದ್ ಕರೆ ವಿಫಲ

ಸೆಪ್ಟೆಂಬರ್ 11ರಂದು ಕಲ್ಕತ್ತಾ ಬಂದ್'ಗೆ ಕಾಂಗ್ರೆಸ್ (ಐ) ನೀಡಿದ ಕರೆಯನ್ನು ಅಲ್ಲಿನ ಜನತೆ ತಿರಸ್ಕರಿಸಿಬಂದ್ ಸಂಪೂರ್ಣ ವಿಫಲವಾಗುವಂತೆಮಾಡಿದೆ.

ಕಲ್ಕತ್ತಾ ನಗರದ ರಾಟನ್ ಚೌಕದಲ್ಲಿ ಇತ್ತೀಚೆಗೆ ಕಾಂಗ್ರೆಸ್ಸಿನ ಗೂಂಡಾಗಳು ನಡೆಸಿದ ಹಿಂಸಾಚಾರವನ್ನು ತಡೆಯಲು ಪೋಲಿಸರು ಕೈಗೊಂಡ ಕ್ರಮವನ್ನು [illegible]ಭಟಿಸಿ ಕಾಂಗ್ರೆಸ್ 12 ಗಂಟೆಗಳ ಬಂ[illegible]ಗೆ ಕರೆ ನೀಡಿತ್ತು. ಕಾಂಗ್ರೆಸ್ಸಿನ ಈ ಮನ[illegible]ಯನ್ನು ನಗರದ ಜನತೆ ತಿರಸ್ಕರಿಸಿದ್ದು ಜನ ಜೀವನ ಎಂದಿನಂತಿತ್ತು. ಅಂಗಡಿಗಳು, ಸಾರಿಗೆ ಸೌಕರ್ಯಗಳು ಸರ್ಕಾರಿ ಕಚೇರಿಗಳು, ಬ್ಯಾಂಕುಗಳು ಎಂದಿನ ಹಾಗೆ ಕಾರ್ಯ ನಿರ್ವಹಿಸಿದವು.

"1987ರ ರಾಷ್ಟ್ರೀಯ ಬಿಕ್ಕಟ್ಟು ಎಂಬ ವಿಷಯದ ಬಗ್ಗೆ ಪ.ಬಂಗಾಳ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿ ಸಂಘ ಸೆ.13 ರಂದು ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಇದರಲ್ಲಿ ಮಾಜೀ ರಕ್ಷಣಾಮಂತ್ರಿ ವಿ.ಪಿ.ಸಿಂಗ್ ಲೋಕದಳ(ಬಿ) ಮುಖಂಡ ಹೆಚ್.ಎನ್.ಬಹುಗುಣ ಪ.ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಮುಂತಾದವರು ಭಾಗವಹಿಸಲಿದ್ದರು. ಈ ಕಾರ್ಯಕ್ರಮ ನಡೆಯದಂತೆ ಮಾಡುವ ದುರುದ್ದೇಶದಿಂದ ಕಾಂಗ್ರೆಸ್ಸಿನ ಗೂಂಡಾಗಳು ರಾಟನ್ ಚೌಕದಲ್ಲಿ ಹಿಂಸಾಚಾರ ನಡೆಸಿದರೆಂದು ವಿದ್ಯಾರ್ಥಿ ಸಂಘ ಆಪಾದಿಸಿದೆ. ಸಿ.ಪಿ.ಐ (ಎಂ)ನ ಕೇಂದ್ರ ಸಮಿತಿ ಸದಸ್ಯ ಕಾ.ಬಿಮನ್‌ಬಸು ಸಹ 'ವಿಚಾರ ಸಂಕಿರಣ'ವನ್ನು ನಡೆಯದಂತೆ ಮಾಡುವುದೇ 'ಬಂದ್' ಹಿಂದಿನ ಉದ್ದೇಶ ಎಂದು ಹೇಳಿದ್ದಾರೆ. ○

ಎಸ್. ಎಫ್. ಐ. ನ ಬೃಹತ್ ಪ್ರದರ್ಶನ

ಸ್ಕಾಲರ್‌ಶಿಪ್, ಅಂಚೆ ತೆರಪಿನ ವಿದ್ಯಾರ್ಥಿಗಳ ಸಮಸ್ಯೆಗಳು ಮತ್ತು ಇನ್ನಿತರ ಬೇಡಿಕೆಗಳನ್ನು ಒತ್ತಾಯಿಸಿ ಸೆಪ್ಟೆಂಬರ್ 18 ರಂದು ಎಸ್.ಎಫ್.ಐ. ಹೈದರಾಬಾದ್‌ನಲ್ಲಿ ಬೃಹತ್ ಪ್ರದರ್ಶನವನ್ನು ಸಂಘಟಿಸಿತು. ಹತ್ತು ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನೊಳಗೊಂಡ ಬೃಹತ್ ಮೆರವಣಿಗೆಯ ನೇತೃತ್ವವನ್ನು ಆಂಧ್ರ ಪ್ರದೇಶ ರಾಜ್ಯ ಎಸ್.ಎಫ್.ಐ. ಅಧ್ಯಕ್ಷ ಜಿ. ಅಬ್ದುಲ್ ಖಾದರ್, ಕಾರ್ಯದರ್ಶಿ ವಿ.ಕೃಷ್ಣಯ್ಯ ಹೈದರಾಬಾದ್ ನಗರ ಕಾರ್ಯದರ್ಶಿ ಪಾರ್ಥಸಾರಥಿ, ಅಧ್ಯಕ್ಷ ಬುಚ್ಚಿರೆಡ್ಡಿ ಹಾಗೂ ಖಮ್ಮಂ, ಕರ್ನೂಲು, ವಾರಂಗಲ್, ಗುಂಟೂರು ಹಾಗೂ, ಕೃಷ್ಣಾ ಜಿಲ್ಲೆಗಳಎಸ್.ಎಫ್.ಐ. ಮುಖಂಡರು ವಹಿಸಿದ್ದರು. ತುಂಬಾ ಆಕರ್ಷಕವಾಗಿ ಕಂಡು ಬಂದ ಮೆರವಣಿಗೆಯನ್ನು ನಗರದ ನಾಗರೀಕರು ಕುತೂಹಲದಿಂದ ವೀಕ್ಷಿಸಿದರು. ಪ್ರಮುಖ ರಸ್ತೆಗಳ ವಾಹನ ಸಂಚಾರ ಅನೇಕ ಗಂಟೆಗಳ ಕಾಲ ಸ್ತಬ್ಧಗೊಂಡಿತ್ತು. ನಂತರ ನಡೆದ ಬಹಿರಂಗ ಸಭೆಯಲ್ಲಿ ಎಸ್.ಎಫ್.ಐ. ಮುಖಂಡರುಗಳು ಮಾತನಾಡಿ ಹೈಸ್ಕೂಲ್ ವಿದ್ಯಾರ್ಥಿಗಳ ಸ್ಕಾಲರ್ ಶಿಪ್ ಅನ್ನು 100 ರೂಗಳಿಂದ 200ರೂಗಳಿಗೆ ಕಾಲೇಜು ವಿದ್ಯಾರ್ಥಿಗಳ ವೇತನವನ್ನು 150 ರಿಂದ 250 ಕ್ಕೆ ಹೆಚ್ಚಿಸಬೇಕೆಂದೂ, ಪಠ್ಯ ಪುಸ್ತಕ ಸಮವಸ್ತ್ರ, ವೈದ್ಯಕೀಯ ತಪಾಸಣೆ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿದೆ.

REG No. BGW-148 MAG (2) PRB DECR 378-79

ದೇವೀಲಾಲ್‌ರಿಗೆ ಸುರ್ಜಿತ್ ಪತ್ರ

[1ನೇ ಪುಟದಿಂದ]

ಬುನಾದಿ. ಹಿಂದೂ ಮತ್ತು ಮುಸ್ಲಿಮರ ನಡುವೆ ಕಂದರ ಏರ್ಪಡಿಸುತ್ತಿರುವ ವಿಶ್ವ ಹಿಂದೂ ಪರಿಷದ್‌ನ ಬೆನ್ನಹಿಂದಿರುವ ಪ್ರಮುಖ ಶಕ್ತಿ ಬಿ.ಜೆ.ಪಿ.ನೇ ನಮ್ಮ ಪಕ್ಷದ ಅಭಿಪ್ರಾಯದಲ್ಲಿ ನಾವು ಕೋಮುವಾದಿ, ಜಾತಿವಾದಿ, ವಿಚ್ಛಿದ್ರಕಾರಿ ಹಾಗೂ ಪ್ರತ್ಯೇಕತಾವಾದೀ ಶಕ್ತಿಗಳ ವಿರುದ್ಧ ಸ್ಪಷ್ಟ ನಿಲುವು ತಳೆದು ರಾಷ್ಟ್ರೀಯ ಐಕ್ಯತೆಯ ರೂವಾರಿಗಳಾಗಿ ಮೂಡಿ ಬಂದರೆ ಮಾತ್ರವೇ ರಾಜೀವ್‌ಗಾಂಧಿ ಸರ್ಕಾರವನ್ನು ಇಳಿಸಿಹೊಸದೊಂದು ಚುನಾವಣೆ ನಡೆಸಲ್ಲಿಕ್ಕಾಗಿ ಪರಿಣಾಮಕಾರಿಯಾದ ಹೋರಾಟ ನಡೆಸಲು ಸಾಧ್ಯ. ಪ್ರತ್ಯೇಕತಾವಾದದ ವಿರುದ್ಧ ಹೋರಾಟದಲ್ಲಿ ನಮ್ಮ ಹಲವು ಪ್ರಮುಖ ಸಂಗಾತಿಗಳು ತಮ್ಮ ಪ್ರಾಣಾರ್ಪಣೆ ಮಾಡಿದ್ದಾರೆಂದು ನಿಮಗೆ ತಿಳಿದ ವಿಷಯವೇ.

ನಾವು ಕೋಮುವಾದಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳೊಂದಿಗೆ ಕೈ ಮಿಲಾಯಿಸಲು ಸಾಧ್ಯವಿಲ್ಲವೆಂಬುದನ್ನು ಬಾರಿ ಬಾರಿಗೂ ಸ್ಪಷ್ಟಗೊಳಿಸಿದ್ದೇವೆ. ಆದ್ದರಿಂದ ಇಂತಹ ಸಭೆಯೊಂದರಲ್ಲಿ ಭಾಗವಹಿಸಲು ಒಪ್ಪುವುದು ನಮಗೆ ಅಸಾಧ್ಯ. ಇನ್ನೊಂದು ವಿಷಯ ನಮ್ಮ ಯಾವ ಮುಖಂಡರಿಗೂ ವೈಯಕ್ತಿಕ ಎಂಬುದು ಬೇರೆ ಇಲ್ಲ. ಅವರೆಲ್ಲರೂ ಪಕ್ಷದ ಅಭಿಪ್ರಾಯವನ್ನು ಪ್ರತಿನಿಧಿಸುತ್ತಾರೆ.

ಭ್ರಷ್ಟಾಚಾರದ ಹಗರಣಗಳಿಂದ ತತ್ತರಿಸುತ್ತಿರುವ ಈಗಿನ ಜನವಿರೋಧಿ ಸರ್ಕಾರದ ವಿರುದ್ಧ ಹೋರಾಟಕ್ಕೆ ಜನರನ್ನು ಅಣಿ ನೆರೆಸುವಲ್ಲಿ ಎಲ್ಲಾ ಜಾತ್ಯಾತೀತ ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಸಾಧ್ಯತೆ ಹಾಗೂ ಸಂಯುಕ್ತ ಕಾರ್ಯಾಚರಣೆಯ ಕಾರ್ಯಕ್ರಮದ ಬಗ್ಗೆ ನಿಮ್ಮೊಡನೆ ಚರ್ಚಿಸಲು ನಾವು ಸಿದ್ಧ.

ಶುಭಾಶಯಗಳೊಂದಿಗೆ,
ನಿಮ್ಮ ವಿಶ್ವಾಸಿ
ಹರ್‌ಕಿಶನ್ ಸಿಂಗ್ ಸುರ್ಜಿತ್.

ಕೈಗೊಂಬೆಯಾದ ಸಿಖ್ ಗುರುಗಳು

[1ನೇ ಪುಟದಿಂದ]

ಅದೇನೆಂದರೆ ರಾಜಕೀಯವನ್ನು ಧರ್ಮದೊಂದಿಗೆ ಬೆರೆಸುವುದರಿಂದ ಹತೋಟಿ ಕ್ರಮೇಣ ಉಗ್ರಗಾಮಿಗಳ ಕೈಗೆ ಜಾರಿ, ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ ಕೂಡಾ ಯಾವುದೇ ಅಧಿಕಾರ, ಹತೋಟಿಯಿಲ್ಲದೆ ಮೂಕ ಪ್ರೇಕ್ಷಕನಾಗುವ ಸ್ಥಿತಿ ಬಂದೊದಗುತ್ತಿದೆ.

ಈ ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ವಿರೋಧಿಸಿ, ದುಷ್ಟ ಕೃತ್ಯಗಳಿಗೆ ಗುರು ದ್ವಾರಗಳನ್ನು ಬಳಸಲು ಅವಕಾಶ ಕೊಡದೆ, ಪ್ರತ್ಯೇಕತಾವಾದವನ್ನು ವಿರೋಧಿಸಿ ದೇಶದ ಐಕ್ಯತೆಯನ್ನು ಜೋಪಾನವಾಗಿಡಲು ಒಗ್ಗಟ್ಟಾಗಿ ನಿಲ್ಲಬೇಕೆಂದು ಪಂಜಾಬಿನ ಜನತೆಗೆ, ವಿಶೇಷವಾಗಿ ಸಿಖ್ಖ ಜನ ಸಮೂಹಗಳಿಗೆ ಪಾಲಿಟ್ ಬ್ಯೂರೋ ಮನವಿ ಮಾಡಿದೆ. ರಾಜಕೀಯ ಪಕ್ಷಗಳೂ ಕೂಡಾ ಈ ದುಷ್ಟ ಪ್ರಯತ್ನಗಳನ್ನು ಖಂಡಿಸಿ ಪಂಜಾಬ್ ಜನತೆಯಲ್ಲಿ ದೇಶ ಪ್ರೇಮದ ಭಾವನೆಗಳನ್ನು ಜಾಗೃತ ಗೊಳಿಸುವಲ್ಲಿ ಸಕ್ರೀಯ ಪಾತ್ರ ವಹಿಸಬೇಕೆಂದೂ ಅದು ಮನವಿ ಮಾಡಿದೆ.

ಪಂಜಾಬಿನ ಪರಿಸ್ಥಿತಿ ಸತತವಾಗಿ ಹದಗೆಡುತ್ತಾ ಹೋಗಿ ಪಂಜಾಬಿನ ಜನತೆಯಲ್ಲಿ ಮತ್ತು ದೇಶದ ಅಲ್ಪಸಂಖ್ಯಾತರಲ್ಲಿ ಅಭದ್ರತೆಯ ಭಾವನೆ ಹುಟ್ಟಿದಂತಾಗಲು ಕೇಂದ್ರ ಸರ್ಕಾರವೇ ಹೊಣೆ. ಈಗಲಾದರೂ ಕೇವಲ ಆಡಳಿತಾತ್ಮಕ ಕ್ರಮಗಳಿಂದಲೇ ಉಗ್ರಗಾಮಿಗಳ ಹಾಗೂ ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಡಲು ಸಾಧ್ಯವಿಲ್ಲವೆಂಬುದನ್ನು ಅರಿತುಕೊಳ್ಳಬೇಕು. ಜನರನ್ನು ಪ್ರತ್ರೇಕತಾವಾದಿಗಳ ವಿರುದ್ಧ ಸಕ್ರೀಯ ಗೊಳಿಸಲು ರಾಜಕೀಯ ಕ್ರಮ ಅಗತ್ಯ. ಪಂಜಾಬ್ ಒಪ್ಪಂದವನ್ನು ಅನುಷ್ಠಾನಕ್ಕೆ ತರದೆ ವಿಶ್ವಾಸಾರ್ಹತೆಯನ್ನು ಸರ್ಕಾರ ಕಳಕೊಂಡಿತು. ಜನರ ಈ ಹೋರಾಟದಲ್ಲಿ ಮಧ್ಯ ಪ್ರವೇಶಿಸದಂತೆ ಮಾಡುವಲ್ಲಿ ಇದನ್ನು ಬಳಸಿಕೊಳ್ಳುವುದು ಉಗ್ರಗಾಮಿಗಳಿಗೆ ಸಾಧ್ಯವಾಯಿತು.

ಆದ್ದರಿಂದ ಕೇಂದ್ರ ಸರ್ಕಾರ ತನ್ನ ಸಂಕುಚಿತ ಪಕ್ಷಪಾತದ ನಿಲುವು ಬಿಟ್ಟುಕೊಟ್ಟು, ನಿಷ್ಕ್ರಿಯತೆಯ ನಿಲುವು ತ್ಯಜಿಸಿ ವಿಶಾಲ ರಾಷ್ಟ್ರೀಯ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪಂಜಾಬ್ ಸಮಸ್ಯೆಯನ್ನು ಪರಿಹರಿಸಬೇಕೆಂದು ಪಾಲಿಟ್ ಬ್ಯೂರೊ ಕರೆ ನೀಡಿದೆ.

○

ಡಿ.ವೈ.ಎಫ್.ಐ. ಘಟಕ

ಗಂಗಾವತಿಯ ಮಹಬೂಬ್ ನಗರದಲ್ಲಿ ಆಗಸ್ಟ್ 3 ರಂದು ಡಿ.ವೈ.ಎಫ್.ಐ.ಘಟಕವನ್ನು ತುಂಗಭದ್ರ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಶ್ರೀಗಂಗಣ್ಣ ಪತ್ತಾರ್ ಉದ್ಘಾಟಿಸಿದರು. ರೈತ ಸಂಘದ ಬಸವರಾಜ್‌ಖಿಲ್ಲೇದ್ ಅಧ್ಯಕ್ಷತೆ ವಹಿಸಿದ್ದರು ಎಸ್.ಇ.ಜಬೀವುಲ್ಲಾ ಖಾದ್ರಿ ಸ್ವಾಗತಿಸಿದರು. ವಕೀಲರಾದ ಶ್ರೀಮಹಾಬಲೇಶ್ವರ, ಶ್ರೀ ವೆಂಕಾರೆಡ್ಡಿ ಮುಖ್ಯ ಅತಿಥಿಗಳಾಗಿಮಾತನಾಡಿದರು ಸುಮಾರು 500 ಮಂದಿ ನಗರದ ಜನತೆಸಮಾರಂಭದಲ್ಲಿ ಪಾಲ್ಗೊಂಡಿತು ಶ್ರೀಜಾನ್ ವಂದನಾರ್ಪಣೆಮಾಡಿದರು. ನೂತನ ಘಟಕದ ಕಾರ್ಯದರ್ಶಿಯಾಗಿ ಕಾ.ಎಸ್.ಇ.ಜಬೀವುಲ್ಲಾಖಾದ್ರಿ ಯವರನ್ನೊಳಗೊಂಡ ಏಳು ಮಂದಿಯ ಕಾರ್ಯಕಾರಿ ಸಮಿತಿ ಆಯ್ಕೆಮಾಡಲಾಯಿತು.

○

ತೆಕ್ಕಟ್ಟೆ ಬೀಡಿಯೂನಿಯನ್ ಮಹಾಸಭೆ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತೆಕ್ಕಟೆಯಲ್ಲಿ ಆಗಸ್ಟ್ 15 ರಂದು ಬೀಡಿ ಕಾರ್ಮಿಕರ ಸಭೆ ಸೇರಿತು ಮುಖಂಡರಾದ ಕಾ.ಮಹಾಬಲವಡೇರ ಹೋಬಳಿಯವರು ಹಾಗೂ ಕಾ.ರಮಾನಾಥ್, ಭಾಗವಹಿಸಿದ್ದರು. ಪ್ರಸ್ತುತ ಸಾಲಿಗೆ ಬೀಡಿ ವರ್ಕರ್ಸ್ ಯೂನಿಯನ್‌ಗೆ ಕಾ.ಶ್ರೀಮತಿಸೆಕಿನ್‌ಬಿ(ಅಧ್ಯಕ್ಷೆ) ಕಾ.ಕಮಲ(ಕಾರ್ಯದರ್ಶಿನಿ) ಯವರನ್ನೊಳಗೊಂಡ 15 ಮಂದಿ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

○

ಕಾ|| ಶಾಮಣ್ಣ ನಿಧನ

ಬೆಂಗಳೂರಿನ ರಾಮಚಂದ್ರಪುರ ಪ್ರದೇಶದ ಪಕ್ಷದ ಸದಸ್ಯ ಹಿತೈಷಿ ಕಾ ಶ್ಯಾಮಣ್ಣನವರು ಸೆಪ್ಟೆಂಬರ್ 18 ರಂದು ಹೃದಯಾಘಾತದಿಂದ ನಿಧನರಾದರು.

ಕಾ.ಶ್ಯಾಮಣ್ಣನವರು 50-60ರ ದಶಕದಲ್ಲಿಯೇ ಮೈಸೂರು ಮಿಲ್ಸ್ ಹತ್ತಿಗಿರಣಿ ಕಾರ್ಮಿಕ ಸಂಘ ಕಟ್ಟುವಲ್ಲಿ ಮುಂದಾಳತ್ವವಹಿಸಿದ್ದರು.1964 ರಲ್ಲಿ ಪರಿಷ್ಕರಣವಾದ ವಿರುದ್ಧ ನಡೆದ ಹೋರಾಟದಲ್ಲಿ ಸಿ.ಪಿ.ಐ.(ಎಂ) ನಿಲುವನ್ನು ಎತ್ತಿಹಿಡಿದು ಸಾಯುವ ಕೊನೆಗಳಿಗೆಯವರೆವಿಗೂ ಪಕ್ಷದ ಹಾಗೂ ಸಾಮೂಹಿಕ ಸಂಘಟನೆಗಳ ದಿನನಿತ್ಯದ ಚಟುವಟಿಕೆಗಳಲ್ಲಿ ಸಕ್ರೀಯ ಪಾಲ್ಗೊಂಡವರು. ಎಲ್ಲಾ ಸಂಗಾತಿಗಳೊಂದಿಗೆ ಅವರು ವಿನಯ ಸರಳತೆಯ ಗುಣಗಳನ್ನು ಅಳವಡಿಸಿಕೊಂಡವರಾಗಿದ್ದರು ಕಾ.ಶ್ಯಾಮಣ್ಣನವರ ನಿಧನಕ್ಕೆ ಪಕ್ಷದ ಜಿಲ್ಲಾ ಸಮಿತಿ, ಶ್ರೀರಾಮಪುರ ಶಾಖೆ, ಆಟೋ, ಮಿನರ್ವಮಿಲ್ಸ್ ಮತ್ತು ರಾಜಾಮಿಲ್ಸ್ ಸಂಘಗಳ ಹಾಗೂ ಐಕ್ಯರಂಗದ ಶ್ರದ್ಧಾಂಜಲಿ ಅರ್ಪಿಸಿವೆ.

○

ಕಾ. ಸೂರಿಯವರ ನಿರಶನ ಅಂತ್ಯ

ಕಾಂ.ಸ್ಯೂರಿಯವರ ನಿರಶನ ಸತ್ಯಾಗ್ರಹಕ್ಕೆ ಹಾಗೂ ಸಿ.ಐ.ಟಿ.ಯು.ನ ಬೇಡಿಕೆಗೆ ಬಿ.ಇ.ಎಲ್.ನ ಇತರ ಕಾರ್ಮಿಕ ಸಂಘಟನೆಗಳಿಂದ ತಡೆ, ಬೆದರಿಕೆಗಳಿದ್ದರೂ ಬಿ. ಇ. ಎಲ್.ನ ಎಲ್ಲಾ ಕಾರ್ಮಿಕರಿಂದ ಸ್ವಯಂ ಸ್ಫೂರ್ತಿಯ, ಉತ್ಸಾಹದ ಬೆಂಬಲ ವ್ಯಕ್ತಪಟ್ಟಿತು. ಜೊತೆಗೆ ಇತರ ಕಾರ್ಮಿಕ ಸಂಘಗಳಿಂದಲೂ ಸೌಹರ್ದ ಬೆಂಬಲ ವ್ಯಕ್ತ ಪಟ್ಟಿತು. ರಾಜ್ಯ ಕಾರ್ಮಿಕ ಇಲಾಖೆ ಸಿ.ಐ.ಟಿ.ಯು. ವಿನ ಬೇಡಿಕೆಗಳನ್ನು ಈಡೇರಿಸಲು ಮಾತುಕತೆ ನಡೆಸುತ್ತೇವೆಂಬ ಆಶ್ವಾಸನೆ ನೀಡಿ ಉಪವಾಸ ಮುಷ್ಕರವನ್ನು ಮುಕ್ತಾಯಗೊಳಿಸಲು ಒತ್ತಾಯಿಸಿದರು.

ದಾವಣಗೆರೆ ಎಸ್. ಎಫ್. ಐ. ಶಿಬಿರ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ದಾವಣಗೆರೆ ಘಟಕ ಸೆಪ್ಟೆಂಬರ್ 13ರಂದು ಕಾರ್ಯಕರ್ತರ ತರಬೇತಿ ಶಿಬಿರ ಏರ್ಪಡಿಸಲಾಯಿತು. 30 ಪ್ರತಿನಿಗಳು ಭಾಗವಹಿಸಿದ್ದರು. ರಾಜ್ಯ ಸಮಿತಿ ಸದಸ್ಯ ಕಾ.ಕೃಷ್ಣಾಜಿಕಲಾಲ್ ಸ್ವಾಗತಿಸಿದರು. ರಾಜ್ಯ ಸಮಿತಿ ಸದಸ್ಯೆ ತೇಜಸ್ವಿನಿಯವರು ಎಸ್.ಎಫ್.ಐ ಸಂವಿಧಾನ ಕಾರ್ಯಕ್ರಮ ಹಾಗದ ಶೈಕ್ಷಣಿಕವಾಗಿ ಸಮುದಾಯ ಎದುರಿಸುವ ಸಮಸ್ಯೆಗಳ ಕುರಿತು ಉಪನ್ಯಾಸ ನೀಡಿದರು, ಸಮುದಾ ಕಾರ್ಯದರ್ಶಿ ಯಾಕೂಬ್ ಎ.ಐ.ಎಸ್.ಎಫ್.ನ ಬಸವರಾಜು ಶುಭಾಶಯ ಕೋರಿದರು. ಶಿಬಿರದಲ್ಲಿ ರಚಿತವಾದ ಸಂಘಟನಾ ಸಮಿತಿಗೆ ಕಾ.ಕೃಷ್ಣಾಜಿಕಲಾಲ್(ಸಂಚಾಲಕ(ಪಕೀರಪ್ಪ ಮಹಾಂತೇಶ ನಾಗರಾಜರವರು, ಗಳು ಸಹ ಸಂಚಾಲಕರಾಗಿ ಮತ್ತು 8 ಜನ ಸದಸ್ಯರ ಸಮಿತಿ ರಚಿಸಲಾಯಿತು ಕೊನೆಯಲ್ಲಿ ಆಶು ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು ಡಿ.ನಾರಾಯಣರ ವಂದನಾರ್ಪಣೆಯೊಂದಿಗೆ ಶಿಬಿರ ಮುಕ್ತಾಗೊಂಡಿತು.

○

ಎಸ್. ಎಫ್. ಐ., ಡಿ. ವೈ. ಎಫ್. ಐ. ಕಾರ್ಯಕರ್ತರ ಬಂಧನ

ರಾಜೀವ್‌ಗಾಂಧಿಯ ಒರಿಸ್ಸಾ ಭೇಟಿ ಸಮಯದಲ್ಲಿ ಅಲ್ಲಿಯ ಕಾಂಗ್ರೆಸ್ ಸರಕಾರ ಒರಿಸ್ಸಾದ ಎಸ್.ಎಫ್.ಐ. ಡಿ.ವೈ.ಎಫ್.ಐ.ನ ಎ.ಐ.ವೈ.ಎಫ್ ಕಾರ್ಯಕರ್ತರನ್ನು ಭೇಟಿಯ ಎರಡು ದಿನ ಮೊದಲೇ ಬಂಧಿಸಿಡುವ ಹೇಡಿತನ ತೋರಿಸಿದೆ. ಕಾಲಂ ಹಂಡಿ ಮೊದಲಾದ ಸ್ಥಳಗಳಲ್ಲಿ 500ಕ್ಕೂ ಹೆಚ್ಚು ಜನ ಬರಗಾಲದ ಪರಿಣಾಮವಾಗಿ ಹಸಿವಿನಿಂದ ಕಂಗಾಲಾಗಿ ಸತ್ತರೆಂಬ ಕರಾಳ ಸತ್ಯವನ್ನು ಪರಿಹಾರ ಕಾರ್ಯದ ಭ್ರಷ್ಟತನ, ಅಧ್ಯಕ್ಷತೆಗಳನ್ನು ಮುಚ್ಚಿಕೊಳ್ಳುವ ಏಕೈಕ ಉದ್ದೇಶದಿಂದ ಈ ಹೇಡಿಕೃತ್ಯವನ್ನೆಸಗಿದೆ.

ಈ ಬಂಧನವನ್ನು ಪಕ್ಷದ ಒರಿಸ್ಸಾ ರಾಜ್ಯ ಸಮಿತಿಯ ಕಾರ್ಯದರ್ಶಿ ಶಿವಾಜಿ ಪಟ್ನಾಯಕ್ ಖಂಡಿಸಿದ್ದಾರೆ.

ಈ ವಾರ....

★ ಉಪ್ಪಿನ ಬೆಲೆ ಕಿಲೋಗೆ 70 ಪೈಸೆ ಇದ್ದರೆ ಅದರಲ್ಲಿ ಕೆಲಸಗಾರನಿಗೆ ಸಿಗುವುದು 1 ಪೈಸೆ ಮಾತ್ರ ಉಳಿದ 69 ಪೈಸೆ ವಿವಿಧ ಮಂದಿ ಹಂಚಿಕೊಳ್ಳುತ್ತಾರೆ. ಕೆಲಸ ಗಾರನಿಗೆ 1 ಪೈಸೆ ಜೊತೆ ಸಿಗುವುದು ವಿವಿಧ ರೀತಿಯ ರೋಗಗಳು, ಉಪ್ಪಿನ ಸತತ ಸಂಪರ್ಕದಿಂದ

—ಸುಧಾ

★ ಶತಮಾನಗಳ ಕಪ್ಪು ನೆರಳು
ಗಂಡು ಹೆಣ್ಣಿನ ಅನ್ಯೋನ್ಯ ಪ್ರೇಮ ಸಂಬಂಧವೇ ಬೇರೆ. ಆದರೆ ಗಂಡ ಸತ್ತ ಕೂಡಲೇ ಅವನಿಗೇ ಮುಡಿಪಾದ ತನ್ನ ಸರ್ವಸ್ವವೂ ಅವನೊಡನೆಯೇ ಹೋಗಬೇಕು.ಎಂಬ ಶತಮಾನಗಳ ಸರ್ವಾಂಗ ದಾಸ್ಯವೇ ಬೇರೆ. ಹೆಂಡತಿ ಸತ್ತರೆ ಗಂಡನಾಗಲಿ, ಅಪ್ಪ ಸತ್ತರೆ ಮಕ್ಕಳಾಗಲೀ ಸಹಗಮನ ಮಾಡುವುದಿಲ್ಲ ಏಕೆ ?

'ಸತಿ' ಕುರಿತು

★ ಅಭಿವೃದ್ಧಿಶೀಲ ದೇಶಗಳಲ್ಲಿ ನೀರಿನಿಂದ ಬರುವ ರೋಗಗಳಿಂದ ಪತ್ರಿದಿನ ಸುಮಾರು 25 ಸಾವಿರ ಜನ ಸಾಯುತ್ತಾರೆ. ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರತಿ ಐದು ರೋಗಗಳಲ್ಲಿ ನಾಲ್ಕು ಕೊಳಕು ನೀರಿನಿಂದ ಬರುತ್ತವೆ. 300 ಕೋಟಿ ಜನರು ಅಶುದ್ಧ ನೀರನ್ನು ಬಳಸುತ್ತಾರೆ.

-ವಿಶ್ವಸಂಸ್ಥೆಯ ಅಧ್ಯಯನ
'ಸುದ್ದಿ ಸಂಗಾತಿ' ಸಂಪಾದಕೀಯ

★ ತಮಾಷೆಯೆಂದರೆ ಬಹುತೇಕ ಜಿಲ್ಲಾ ಪರಿಷತ್ತುಗಳ ಮುಂಗಡ ಪತ್ರದಲ್ಲಿ ಸರ್ಕಾರದಿಂದ ಸಂದಾಯವಾಗುವ ಹಣದಲ್ಲಿ 'ಯೋಜನೆ' ಗಿಂತಲೂ 'ಯೋಜನೇತರ' ವಿಷಯಗಳಿಗೆ ಹೆಚ್ಚು ವೆಚ್ಚವಾಗುವುದು, ಕಂಡು ಬರುತ್ತದೆ.

—'ಲಂಕೇಶ್ ಪತ್ರಿಕೆ' ವರದಿ

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor Ramachandra Rao
Managing Edior : N. K. Upadhyaya